ಅಧ್ಯಕ್ಷರು: ನೋಡ್ರಿ, ಇನ್ನು ಹೆಚ್ಚು ಎಂದರೆ, ಅರ್ಧ ಗಂಟೆಗೆ ಮೂರ್‍ೈಸಿಬಿಡೋಣ.

ಶ್ರೀ ಹೆಚ್.ಡಿ. ರೇವಣ್ಣ: ಸರ್ ಗಮನ ಸೆಳೆಯುವುದು ಕೊಟ್ಟುಬಿಡಿ ಸರ್. ಬೇಕಾದರೆ ನಾಳೆ ಮಾತನಾಡಿಕೊಳ್ಳಲಿ. ಮಾತನಾಡಬಹುದು.

6. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ: ರಾಜ್ಯದ ಲೋಕಾಯುಕ್ತ ಸಂಸ್ಥೆಯಲ್ಲಿನ ಭ್ರಷ್ಟಾಚಾರ ಹಾಗೂ ಇದರ ವಿರುದ್ಧ ರಾಜ್ಯದಾದ್ಯಂತ ನಡೆಯುತ್ತಿರುವ ಪ್ರತಿಭಟನೆಗಳ ಬಗ್ಗೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ): ಮಾನ್ಯ ಅಧ್ಯಕ್ಷರೆ, ಇವತ್ತು ಲೋಕಾಯುಕ್ತ ಸಂಸ್ಥೆಯ ಕಾರ್ಯವೈಖರಿ ಬಗ್ಗೆ ನಾಕಷ್ಟು ಚರ್ಚೆಗಳಾಗಿವೆ. ಮತ್ತೆ ಸಾರ್ವಜನಿಕವಾಗಿ ಕೂಡ ಚರ್ಚೆಗಳಾಗುತ್ತಿವೆ. ಅದನ್ನು ಸ್ವಲ್ಪ ವಿವರವಾಗಿ ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದ್ದಾರೆ. ನಾನು ಅದರ ವಿವರಗಳಿಗೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ಇವತ್ತು ನಮಗೆ ಗೊತ್ತಿರುವ ಹಾಗೆ ಈ ಲೋಕಾಯುಕ್ತ ಸಂಸ್ಥೆ, creation of this House, 1984ರ ಕಾಯ್ದೆ ಮತ್ತು ಲೋಕಾಯುಕ್ತರು ಆಗಬೇಕಾದವರು ಎಂತಹವರು ಎಂದು ಕೂಡ ಹೇಳಿದ್ದಾರೆ. ಯಾರು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಾಧೀಶರು, ಹಾಗೆಯೇ ಉಪಲೋಕಾಯುಕ್ತರು ಆಗಬೇಕಾದರೆ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರು ಅಥವಾ ಮುಖ್ಯ ನ್ಯಾಯಾಧೀಶರು ಅದು ಆಗಬೇಕು. ಇದರ ಹಿಂದಿನ ಉದ್ದೇಶವೇನಿತ್ತು ಎಂದರೆ, ಈ ಒಂದು ಸಂಸ್ಥೆ ಸ್ವಾಯತ್ತತೆಯಾಗಿ ಎಲ್ಲಿಯೂ ನ್ಯಾಯಕ್ಕೆ ತೊಂದರೆಯಾಗದ ರೀತಿಯಲ್ಲಿ ಕೆಲಸ ಮಾಡಬೇಕು ಎನ್ನುವ ಹಿನ್ನೆಲೆಯಲ್ಲಿ ಈ ಕಾಯ್ದೆಯನ್ನು ರಚನೆ ಮಾಡಿದ್ದಾರೆ. ಬಹುಶ: ಆ ಒಂದು ಹಿನ್ನೆಲೆಯಲ್ಲಿ ಅವರ removal ಗೂ ಕೂಡ ಬಹಳ ಬಹಳ

restriction ಹಾಕಿ ವಿಶ್ವಾಸವನ್ನು ವ್ಯಕ್ತಪಡಿಸಿದೆ. ಆದರೆ, ಇವತ್ತು ದುರಾದೃಷ್ಟ ಆ ಎಲ್ಲಾ ವಿಶ್ವಾಸಗಳು ಕೂಡ ಹೊರಗಡೆಗೆ ಹೋಗಿ ಇವತ್ತು ಚರ್ಚೆ ಮಾಡುವಂತಹ ಒಂದು ಪರಿಸ್ಥಿತಿ ಬಂದಿದೆ. ಹಾಗಾಗಿ ನಾವು ಮತ್ತೊಮ್ಮೆ ನಾವೆಲ್ಲರೂ ಸೇರಿ ಈ ಲೋಕಾಯುಕ್ತ ಕಾರ್ಯವೈಖರಿ ಹೇಗಿದೆ ಎಂದು ಹೇಳುವಂತಹದ್ದರ ಬಗ್ಗೆ ನಾವೆಲ್ಲರೂ ಸೇರಿ ಈ ಲೋಕಾಯುಕ್ತ ಕಾರ್ಯವೈಖರಿ ಹೇಗಿದೆ ಎಂದು ಹೇಳುವಂತಹದ್ದರ ಬಗ್ಗೆ ನಾವೆಲ್ಲರೂ ಸೇರಿ ಚಿಂತನೆ ಮಾಡಬೇಕಾಗಿದೆ. ಇವತ್ತು ಕಾರ್ಯವೈಖರಿ ಹೇಗಿದೆ ಎಂದು ಹೇಳುವುದಕ್ಕೆ ನಾನು ಹೆಚ್ಚು ಉದಾಹರಣೆಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಅಧಿಕಾರಿಗಳನ್ನು ಹೇಗೆ blackmail ಮಾಡಿದರು, ಲಿಸ್ಟ್ ಮತ್ತೊಂದು ಹೇಗೆ ನಡೆಯುತ್ತಿದೆ.........

ಅಧ್ಯಕ್ಷರು: ಬೇಡ.

ಶ್ರೀ ಕೆ.ಜಿ. ಬೋಪಯ್ಯ: ನಾನು ಸೂಕ್ಷ್ಮವಾಗಿ ಹೇಳುತ್ತೇನೆ. ನಾನು ವಿವರಗಳಿಗೆ ಹೋಗುತ್ತಿಲ್ಲ. 5–10 ನಿಮಿಷದಲ್ಲಿ ಮುಗಿಸುತ್ತೇನೆ. ನಾನು unnecessary ಮಾತನ್ನೂ ಆಡುವುದಿಲ್ಲ. ಹಾಗಾಗಿ ಕಾರ್ಯವೈಖರಿ ಹೇಗಿದೆ ಎಂದರೆ, Section ನಲ್ಲಿ ಬಹಳ ಸ್ಪಷ್ಟವಾಗಿ ಇದೆ. Matters which may be investigated by the Lokayukta and Upa Lokayukta ಹೀಗೆ ಯಾವ್ಯಾವುದನ್ನು ಮಾಡಬಹುದು ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗೆಯೇ, section 8ರಲ್ಲಿ ಯಾವ್ಯಾವ matters ಅನ್ನು investigation ಮಾಡಬಾರದೆಂದು ಸಹ ಹೇಳಿದ್ದಾರೆ. ಅದರಲ್ಲಿ ಕೆಲವು ಕಂಡೀಷನ್ಸ್ ಅನ್ನು ಹಾಕಿದ್ದಾರೆ. ಇದೆಲ್ಲವನ್ನೂ ಬದಿಗೊತ್ತಿ ಇವತ್ತು ಕಾರ್ಯವೈಖರಿ ನೋಡಿದರೆ ಈ ಕಾಯ್ದೆ ನಮಗೆ ಮಾತ್ರ, ಲೋಕಾಯುಕ್ತ ಸಂಸ್ಥೆಗೆ ಇದು applicable ಅಲ್ಲ ಎನ್ನುವ ರೀತಿಯಲ್ಲಿ ಇವತ್ತು ಆಗುತ್ತಿದೆ. ಒಂದೆರಡು ತಿಂಗಳುಗಳಿಂದ ಲೋಕಾಯುಕ್ತರ ಕಛೇರಿಯಲ್ಲಿ ನಡೆಯುತ್ತಿರುವಂತಹ ಕೆಲವು ವ್ಯವಸ್ಥೆಗಳು ಸಾರ್ವಜನಿಕವಾಗಿ ಚರ್ಚೆ ಮಾಡುವಂತಹದ್ದು ಇವೆಲ್ಲವನ್ನು ನೋಡಿದಾಗ

ಹೀಗೆ ಆಗುತ್ತಿದೆ. ಏಕೆ ಹೀಗೆ ಆಗುತ್ತಿದೆ? ಬಹುಶಃ ಆ ಕಾರ್ಯವ್ಯೈಖರಿಯನ್ನು ನಿಯಂತ್ರಣ ಮಾಡುವಂತಹದ್ದು except removal ಬಿಟ್ಟರೆ ಅವರನ್ನು ಹೇಗೆ ನಿಯಂತ್ರಣ ಮಾಡಬಹುದು ಎಂದು ಹೇಳುವುದಕ್ಕೆ ಈ ಕಾಯ್ದೆಯಿದೆ.

ಅಧ್ಯಕ್ಷರು: ಈಗ removal ಮಾಡುವುದಕ್ಕೆ...

ಶ್ರೀ ಕೆ.ಜಿ. ಬೋಪಯ್ಯ: Removal ಬಗ್ಗೆ ನಾನು ಮಾತನಾಡುವುದೇ ಇಲ್ಲ. Removal ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ, ಕಾರ್ಯವ್ಯೈಖರಿಯನ್ನು ಹೇಗೆ ನಿಯಂತ್ರಣ ಮಾಡಬೇಕು ಹಾಗೂ ಅಲ್ಲಿರುವ ಅಧಿಕಾರಿಗಳು ಹೇಗೆ ಕೆಲಸ ಮಾಡಬೇಕು ಇನ್ನೊಂದು ಎನ್ನುವಂತಹದ್ದು......

ಅಧ್ಯಕ್ಷರು: ನಿಮ್ಮ ಲೋಕಾಯುಕ್ತ ಕಾನೂನಿನಲ್ಲಿ ಏನು ಹೇಳುತ್ತದೆ?

ಶ್ರೀ ಕೆ.ಜಿ. ಬೋಪಯ್ಯ: ಅದನ್ನೇ ನಾನು ಹೇಳುತ್ತಿದ್ದೇನೆ. ಅವರು ಯಾವುದು investigation ಮಾಡಬಾರದು, ಯಾವುದು investigation ಮಾಡಬೇಕು ಎಂದು ಇದೆ. ಅದರ ಪ್ರಕಾರ ಆಗುತ್ತಿಲ್ಲ. ಅದಕ್ಕೋಸ್ಕರವೇ ಇದೆಲ್ಲವೂ ನಡೆಯುತ್ತಿದೆ. ಇಲ್ಲಿ ಬಹಳ ಸ್ಪಷ್ಟವಾಗಿ ಹೇಳಿದೆ. ಕೆಲವು limitations ಕೂಡ ಇವತ್ತು ಹಾಕಿದ್ದಾರೆ. Section 8(C) 'any complaint involving a grievance made after the expiry of a period of six months from the date on which the action complained against become known to the complainant; or any complaint involving an allegation made after the expiry of five years from the date on which the action complained against is alleged to have taken place' ಅಲ್ಲಿ ಅದಕ್ಕೆ ಒಂದು condonation of delay ಬಗ್ಗೆ ಕೊಟ್ಟಿದ್ದಾರೆ. sufficient cause ಎಂದು ಇದ್ದರೆ......

ಅಧ್ಯಕ್ಷರು: Shall not investigate...

ಶ್ರೀ ಕೆ.ಜಿ. ಬೋಪಯ್ಯ: ಹೌದು, not to investigate ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ, ನಾನು ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಇವತ್ತು ಅಧಿಕಾರಿಗಳನ್ನು ಹೇಗೆ blackmail ಮಾಡಿಕೊಂಡು ವಸೂಲಾತಿ ಮತ್ತೊಂದು ಆಗುತ್ತಿದೆ ಎಂದು ಹೇಳುವಂತಹದ್ದನ್ನು ಇವರು ಬೇರೆಯವರನ್ನೂ ಬಿಟ್ಟಿಲ್ಲ. ನಾವು creation ಮಾಡಿದ ಸಂಸ್ಥೆ, ಇಡೀ public ಇದರಲ್ಲಿ ಲೋಕಾಯುಕ್ತವೆಂದರೆ it must have been a watch dog. ಇವತ್ತು ಏನಾಗಿದೆ ಎಂದು ಗೊತ್ತು. ಅದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಇವತ್ತು ಏನು de-notification ಬಗ್ಗೆ ಇಬ್ಬರು ಮಾಜಿ ಮುಖ್ಯಮಂತ್ರಿಗಳ ಮೇಲೆ FIR ಆಗಿದೆ.

ಅಧ್ಯಕ್ಷರು: ಹೇಳಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ನಾನು ಅದನ್ನು ಹೇಳುತ್ತೇನೆ. ಅವರು ಹೇಗೆ ತೆಗೆದುಕೊಂಡಿದ್ದಾರೆ, ಈ ಕಾನೂನು, ಕಾಯ್ದೆಯನ್ನು ಬಿಟ್ಟು ಮಾಡಿದ್ದಾರೆ ಎನ್ನುವುದಕ್ಕೆ ಒಂದೇ ಒಂದು FIR ತೆಗೆದುಕೊಂಡು ಹೇಳುತ್ತೇನೆ. ಬೇರೆ ಹೇಳುವುದಿಲ್ಲ. ಇವತ್ತು ಇದರಲ್ಲಿ ಮಾನ್ಯ ಯಡಿಯೂರಪ್ಪ ಮತ್ತು ಇತರರು, ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅಪರಾಧ ನಡೆದ ದಿನಾಂಕ 12.01.2010 ಈ FIR ಮಾಡುವುದು ದಿನಾಂಕ 20.06.2015ರಂದು. 5 ವರ್ಷಗಳೂ ದಾಟಿ ಹೋಗಿದೆ. 6 ತಿಂಗಳುಗಳೂ ದಾಟಿ ಹೋಗಿದೆ. ಬಹಳ ಸ್ಪಷ್ಟವಾಗಿ FIR ನಲ್ಲಿ ಹೇಳಿದ್ದಾರೆ. Condonation of delay ಎಂದು ಕೊಟ್ಟಿದ್ದರೆ ಆ FIR ಜೊತೆಗೆ ಇದು denotification ಬಗ್ಗೆ ಇದೆ. ಅದರಲ್ಲಿ ಇವತ್ತು 37–38 ಹೀಗೆ FIR ಗಳನ್ನು ಒಂದು ರೀತಿ ಏನು cyclostyle ಮಾಡಿದ್ದಾರೆ. ಸರಣಿ FIR ಮಾಡಿದ್ದಾರೆ. ಆ FIR ಜೊತೆಗೆ ಕೋರ್ಟ್‌ಗೆ ಆ inspector ಒಂದು ವರದಿ ಕೊಟ್ಟಿದ್ದಾರೆ. ಎಲ್ಲಿಯೂ ಕೂಡ ಇದು 6 ತಿಂಗಳುಗಳು ಆದಮೇಲೆ, 5 ವರ್ಷಗಳು ಆದಮೇಲೆ ಕಾರಣ

ಕೊಟ್ಟಿದ್ದಾರೆಂದು ಹೇಳಲಿಲ್ಲ. ಎಲ್ಲಿಯೂ ಹೇಳಲಿಲ್ಲ. ಬೇಕಾದಲ್ಲಿ ನನಗೆ ಅವಕಾಶ ಕೊಟ್ಟರೆ ವರದಿಯನ್ನು ಓದುತ್ತೇನೆ.

ಅಧ್ಯಕ್ಷರು: ಬೇಡ. ಈಗ ಇರತಕ್ಕಂತಹದ್ದು ಇಷ್ಟೇ ನೋಡ್ರಿ. ಇವತ್ತಿನ ಚರ್ಚೆಯ ವಿಷಯ. ಮೊದಲನೆಯ ಬಾರಿಗೆ ಈ ವಿಶೇಷವಾದಂತಹ ಸಂದರ್ಭ ಚರ್ಚೆ ಮಾಡುವುದಕ್ಕೆ ನಮಗೆ ಒದಗಿ ಬಂದಿದೆ. ಈ ಲೋಕಾಯುಕ್ತ ಕಾನೂನಿನಲ್ಲಿ ಇನ್ನೂ ಏನು shortcomings... ವ್ಯಾಪ್ತಿಯನ್ನು ಮೀರಿ ಹೋಗುವಂತಹ ಸನ್ನಿವೇಶದಲ್ಲಿ ಏನು ಮಾಡಬೇಕು ಎನ್ನುವುದರ ಬಗ್ಗೆ....

ಶ್ರೀ ಕೆ.ಜಿ. ಬೋಪಯ್ಯ: ಇದು ಕಾನೂನು ಮೀರಿದ ವ್ಯಾಪ್ತಿ ಎಂದು ಹೇಳುವುದಕ್ಕೆ ಒಂದು ಉದಾಹರಣೆ ಕೊಟ್ಟೇ ಅಷ್ಟೆ.

ಅಧ್ಯಕ್ಷರು: ಅದಕ್ಕೆ ನೀವು ವಕೀಲರಾಗಿ...

ಶ್ರೀ ಕೆ.ಜಿ. ಬೋಪಯ್ಯ: ಅದಕ್ಕೆ ಏನಾದರೂ ಬದಲಾವಣೆಗಳನ್ನು ತರಬೇಕೆಂದು ನನ್ನ ಸಲಹೆ. ಇದು ಒಂದು ಸ್ಪಷ್ಟವಾದಂತಹ ನಿದರ್ಶನ. ಐದು ವರ್ಷಗಳು ದಾಟಿ ಹೋಗಿದೆ. ಅವರ knowledge ಆರು ತಿಂಗಳುಗಳೂ ದಾಟಿ ಹೋಗಿದೆ. ಹೇಗೆ ಇವರು ಒಬ್ಬರು ಲೋಕಾಯುಕ್ತರು ಎಂದು ಇದ್ದಮೇಲೆ ಈ ಎರಡೂ limitation ಆದಮೇಲೆ ಹೇಗೆ entertain ಮಾಡಿದರು, ಅಥವಾ condonation of delay ಮಾಡಿದ್ದರೆ ಕೋರ್ಟ್‌ಗೆ ವರದಿ ಕೊಟ್ಟಾಗ ಅದನ್ನು ಕೊಡಬೇಕು. ಸಾಮಾನ್ಯವಾಗಿ ಲೋಕಾಯುಕ್ತದಲ್ಲಿ FIR register ಆಗುವುದು ನಾನು ತಿಳಿದ ಮಟ್ಟಿಗೆ ಎರಡೇ ಎರಡು ಕೇಸ್‌ಗಳಲ್ಲಿ ಒಂದು gratification, ಯಾರಾದರೂ illegal gratification ತೆಗೆದುಕೊಳ್ಳುತ್ತಿದ್ದರೆ, ಅವರನ್ನು seize ಮಾಡಬೇಕಾದರೆ FIR ಬೇಕು, ಮಹಜರ್ ಬೇಕಾಗುತ್ತದೆ. ಇನ್ನೊಂದು disproportionate income ಅದು ಇದ್ದಾಗ FIR ಮಾಡಬೇಕು, raid ಮಾಡುವುದು ಮತ್ತೊಂದು ಇದೆ.

ಅಧ್ಯಕ್ಷರು: Act ನಲ್ಲಿ provision ಇದೆ ತೋರಿಸಿ.

ಶ್ರೀ ಕೆ.ಜಿ. ಬೋಪಯ್ಯ: Prevention of corruption Act 13 (C) and (D) ಅದಕ್ಕೆ ಮಾತ್ರ FIR ಮಾಡಬೇಕು. ಇದರಲ್ಲಿ ಇರುವಂತಹ allegationನಲ್ಲಿ ಅದು ಎರಡೂ ಬರುವುದಿಲ್ಲ. ಇವರು grafication ತೆಗೆದುಕೊಂಡಿಲ್ಲ. Disproportionate income

ಅಧ್ಯಕ್ಷರು: ಇದು ಒಂದು standing example.

ಶ್ರೀ ಕೆ.ಜಿ. ಬೋಪಯ್ಯ: Yes This is one of the standing examples. How humiliation ಮಾಡುತ್ತಿದ್ದಾರೆ, ಲೋಕಾಯುಕ್ತ ಯಾರ ಪ್ರಭಾವ, ಇನ್ನೊಂದು ಯಾವುದನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದು one of the examples. ಈ ರೀತಿ FIR ಮಾಡುವುದಕ್ಕೆ ಅಧಿಕಾರವಿಲ್ಲದಿದ್ದರೂ ಹೇಗೆ FIR ಮಾಡಿದರು? ಈ 35 cyclostyle ತರಹ FIR ಮಾಡಿದ್ದಾರಲ್ಲಾ, ಹಾಗಾದರೆ ಇದನ್ನು ಎಲ್ಲಿಯೂ ಪ್ರಶ್ನೆ ಮಾಡಬಾರದಾ ಏನು? de-notification ಇವತ್ತು ಏನು ಹೇಳುತ್ತದೆ, ಆ 35 FIR ಗಳು ಆಗಲೇ CAG ವರದಿಯಲ್ಲಿ mention ಮಾಡಿದಂತಹ ಎಲ್ಲಾ ವರದಿಗಳು ಆ CAG ಯಲ್ಲಿ ಮಾಡಬಾರದು ಎನ್ನುವುದನ್ನು ಬಹಳ ಸ್ಪಷ್ಟವಾಗಿ Supreme Count judgement quote ಮಾಡಿರುವುದನ್ನು ವಿರೋಧ ಪಕ್ಷದ ನಾಯಕರು ಹಾಗೂ ಸುರೇಶ್ ಕುಮಾರ್‌ರವರೂ ಹೇಳಿದ್ದಾರೆ. ನಾನು repeat ಮಾಡುವುದಕ್ಕೆ ಹೋಗುವುದಿಲ್ಲ. ಇತ್ತೀಚಿನ judgement ಪ್ರಕಾರ CAG report is not an authentic substantive evidence ಎನ್ನುವುದು ಬಹಳ ಸ್ಪಷ್ಟವಾಗಿ ಸುಪ್ರಿಂಕೋರ್ಟ್ ಹೇಳಿದ ಮೇಲೆ ಇವರಿಗೆ ಅದು ಗೊತ್ತಿರಬೇಕಲ್ಲವೇ? ಅದಕ್ಕೋಸ್ಕರ ಮುಖ್ಯ ನಿವೃತ್ತ ನ್ಯಾಯಾಧೀಶರನ್ನೇ ನೇಮಿಸಿರುವುದು. ಅದು ಎಲ್ಲಾ ಗಾಳಿಗೆ ತೂರಿ ಮಾಡುವುದು. Same offence, de-notification ನಲ್ಲಿ ಇವರದೆಲ್ಲಾ ಸರಿ ಎಂದಾದರೆ ಒಂದು FIR ಆದ ನಂತರ ಅದರಲ್ಲಿ investigation ಮಾಡಿ single charge sheet ಹಾಕುವಂತಹದ್ದು ಇರುವುದು.

ಇದು violation of Articles 20 sub clause. 2. Double jeopardy ಆಗುತ್ತದೆ. ಈ ರೀತಿ FIR ಗಳನ್ನು ಮಾಡಿಕೊಂಡು Cr.P.C 300 ಪ್ರಕಾರ ಒಬ್ಬರಿಗೆ ಎಷ್ಟು ಬಾರಿ ಶಿಕ್ಷೆ? ಇದನ್ನು ಕೂಡ ನಾವು ಕೇಳಬಾರದೆ. ಹಾಗಾದರೆ ನಾವು ಪ್ರಶ್ನೆಯನ್ನೇ ಮಾಡಬಾರದೆ?

ಅಧ್ಯಕ್ಷರು: ಪ್ರಶ್ನೆ ಮಾಡಬಾರದೆಂದಲ್ಲ. ಇದಕ್ಕೆ ಏನು ಪರಿಹಾರ ಮಾಡಬೇಕೆಂದು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ: ಪರಿಹಾರವೆಂದರೆ ನಿಯಂತ್ರಣದಲ್ಲಿಡಬೇಕು. ಜನರ ಮನಸ್ಸಿನಲ್ಲಿ ಸಮಗ್ರ ತಿದ್ದುಪಡಿಯಾಗಬೇಕೆಂಬುದೇನಿದೆ, ಆ ಸಮಗ್ರ ತಿದ್ದುಪಡಿಯಾಗಬೇಕೆಂಬುದೇ ನನ್ನ ಒತ್ತಾಯವಾಗಿದೆ. ಹಾಗಾಗಿ ಈ ರೀತಿ ಲೋಕಾಯುಕ್ತ ಸಂಸ್ಥೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಈ ವಿಷಯವನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, same complaint, ವ್ಯಕ್ತಿ ಬೇರೆ. de-notification ಮೇಲೆಯೇ ಹುಣಸೂರು ಕೆ ಚಂದ್ರಶೇಖರ್ ಎಂಬುವವರು ದಿನಾಂಕ:27-09-2014 ರಂದು ಸಿ.ಎ.ಜಿ ವರದಿ ಬಂದ ನಂತರ ಲೋಕಾಯುಕ್ತದ ನ್ಯಾಯಾಲಯದಲ್ಲಿ ಒಂದು ಕೇಸ್ ಹಾಕುತ್ತಾರೆ. ಅವರು complaint ಅನ್ನು dismiss ಮಾಡುತ್ತಾರೆ. Same subject, ವ್ಯಕ್ತಿ ಬೇರೆ. Dismiss ಮಾಡುವಾಗ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, 'Prima facie, I do not find any offence punishable under section 7 of the Prevention of the Corruption Act I equally do not find prima facie case against A1, A3 for the offence punishable under sections 8,9,10,11,12 of the Prevention of Corruption Act, 1988. I do not find prima facie case against A1-A3 for the offences defined under sections 13(1) (c) (d) and 13(3) which is punishable under section 13(2) of the Prevention of Corruption Act, 1988'. Same ಯಡಿಯೂರಪ್ಪ ಮತ್ತು ಬಸವರಾಜು ಇವರ ಮೇಲೆಯೇ. 'There is no prima facie matter against A1 to A3 to hold

that they have received illegal gratification from A4, A5. I find no prima facie case against A4, A5 to attract any offences. When being the case...

ಶ್ರೀ ಸಿದ್ದರಾಮಯ್ಯ: conduct ಬಗ್ಗೆ ಹೇಳುತ್ತಿದ್ದೀರಿ.

ಶ್ರೀ ಕೆ.ಜಿ. ಬೋಪಯ್ಯ: ನಾನು conduct ಬಗ್ಗೆ ಹೇಳುತ್ತಿಲ್ಲ. ನಾನು ಹೇಳುತ್ತಿರುವುದು how they are....ನಾನು ಅವರ removal ಬಗ್ಗೆ ಒಂದು ಶಬ್ದವನ್ನು ಮಾತನಾಡಿಲ್ಲ.

ಶ್ರೀ ಸಿದ್ದರಾಮಯ್ಯ: ಹಾಗಾದರೆ ಏನು ಮಾಡುತ್ತಿದ್ದೀರಿ; ಅದನ್ನು ಬಿಟ್ಟು ಬೇರೆ ಯಾವ ಪ್ರಾವಿಷನ್ ನಲ್ಲಿ ಇದನ್ನೆಲ್ಲಾ ಚರ್ಚೆ ಮಾಡುವುದಕ್ಕೆ ಅವಕಾಶವಿದೆ?

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರು ಯಾವ provision ಅಡಿಯಲ್ಲಿ ಬರುತ್ತದೆ ಎಂದು ಕೇಳಿದ್ದಕ್ಕೆ ಹೇಳುತ್ತಿದ್ದೇನೆ. ನಿಮಗೆ ಕೇಳಲಿಲ್ಲ ಎನಿಸುತ್ತದೆ. Powers ಏನೆಂದು, sections 8, 7 and 9 ಬಗ್ಗೆ ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ: FIR ಅನ್ನು ಹೇಗ ಚರ್ಚೆ ಮಾಡುತ್ತೀರಿ?

ಶ್ರೀ ಕೆ.ಜಿ. ಬೋಪಯ್ಯ: FIR ಮಾಡಿರುವುದು ತಪ್ಪು ಎಂದು ಹೇಳಿದ್ದೇನೆ. They are misusing.

ಶ್ರೀ ಸಿದ್ದರಾಮಯ್ಯ: ಅದನ್ನು ನ್ಯಾಯಾಲಯದಲ್ಲಿ ಹೇಳಬೇಕು, ಇಲ್ಲಿ ಹೇಗೆ ಹೇಳುವುದಕ್ಕಾಗುತ್ತದೆ?

ಶ್ರೀ ಕೆ.ಜಿ. ಬೋಪಯ್ಯ: ನ್ಯಾಯಾಲಯದಲ್ಲಿ ಹೇಳುವುದು ಇರಲಿ.

ಅಧ್ಯಕ್ಷರು: ಸ್ವಲ್ಪ ಇರಿ, ಬೋಪಯ್ಯರವರು misuse of power ಆಗುತ್ತಿದೆಯೆನ್ನುವುದಕ್ಕೊಂದು ಉದಾಹರಣೆ ಎಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ಉದಾಹರಣೆಯೆಂದರೆ misuse ಆಗಿದೆಯೆಂದು ಆಗುತ್ತದೆ.

ಅಧ್ಯಕ್ಷರು: ಅವರ ಪ್ರಕಾರ misuse ಆಗಿದೆ.........

ಶ್ರೀ ಸಿದ್ದರಾಮಯ್ಯ: ಹಾಗೇನಾದರೂ ಇದ್ದರೆ It ıs already in the report Let them challenge ıt before the Court.

ಶ್ರೀ ಕೆ.ಜಿ. ಬೋಪಯ್ಯ: ಅದನ್ನು ಮಾಡುತ್ತೇವೆ. ಇವತ್ತು ಎರಡು ಜನ ಮುಖ್ಯಮಂತ್ರಿಗಳಿಗೆ ಈ ರೀತಿ ಆಗಿದೆ. ನಾಳೆ ನಮಗೂ ಕೂಡ ಇದೇ ಗತಿ.

ಅಧ್ಯಕ್ಷರು: ಸ್ವಲ್ಪ ಇರಿ. ಅದೇನೆಂದರೆ. ಒಂದು CAG report basis ಮೇಲೆ FIR ಹಾಕಿದ್ದಾರೆ.

ಶ್ರೀ ಸಿದ್ದರಾಮಯ್ಯ: No, No, It ıs not correct. That impression is not correct. CAG ವರದಿ ಮೇಲೆ ಎಫ್.ಐ.ಆರ್ ಹಾಕಿಲ್ಲ. ನ್ಯಾಯಾಲಯಕ್ಕೆ ಹೋಗಿ ನ್ಯಾಯಾಲಯದಿಂದ dırectıon ಕೊಟ್ಟು ಆ dırection ಮೇಲೆ CIDಗೆ ಕೊಟ್ಟು CID ಅವರು ಅದನ್ನು ınvestigatıon ಮಾಡಿ ಅವರು ವರದಿ ಕೊಟ್ಟ ನಂತರ FIR ಆಗಿರುವುದು.

ಶ್ರೀ ಕೆ.ಜಿ. ಬೋಪಯ್ಯ: ನಾನು ಓದಿ ಹೇಳುತ್ತೇನೆ.

ಅಧ್ಯಕ್ಷರು: ಸಾಕು ಬಿಡಿ.

ಶ್ರೀ ಕೆ.ಜಿ. ಬೋಪಯ್ಯ: ಇಲ್ಲವಾದರೆ wrong informatıon ಹೋಗಿಬಿಡುತ್ತದೆ. ಆ ರೀತಿ ಇಲ್ಲ.

(ಗೊಂದಲ)

ಅಧ್ಯಕ್ಷರು: ನಿಮಗೆ ಏನು ಅನಿಸುತ್ತದೆಯೋ ಅದನ್ನು ನೀವು ಹೇಳಿ. ಅವರಿಗೆ ಏನು ಕಂಡಿದೆ. ಅದನ್ನು ಅವರು ಹೇಳುತ್ತಾರೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: Court direction ಇದ್ದರೆ ಅವರು ಹೇಳಲಿ.

ಶ್ರೀ ಸಿದ್ದರಾಮಯ್ಯ: It is misleading, CAG report ಮೇಲೆ ಮಾಡಿಲ್ಲ.

ಶ್ರೀ ಕೆ.ಜಿ. ಬೋಪಯ್ಯ: ಮಾಡಿಲ್ಲದಿದ್ದರೆ ನಾನು ಇಲ್ಲಿ ಹೇಳುತ್ತೇನೆ. ನಾನು ಓದುತ್ತೇನೆ.

ಶ್ರೀ ಸಿದ್ದರಾಮಯ್ಯ: ಇಲ್ಲಾರಿ, CAG report ಮೇಲೆ ಮಾಡಿಲ್ಲ.

ಶ್ರೀ ಕೆ.ಜಿ. ಬೋಪಯ್ಯ: ನಾನು ಓದುತ್ತೇನೆ. ಗೌರವಾನ್ವಿತ 23ನೇ ಹೆಚ್ಚುವರಿ City civil ಮತ್ತು........

ಅಧ್ಯಕ್ಷರು: ದಯವಿಟ್ಟು ಈ ರೀತಿ ಚರ್ಚೆ ಆಗುವುದಿಲ್ಲ.

ಶ್ರೀ ಕೆ.ಜಿ. ಬೋಪಯ್ಯ: ಈಗ ರೆಕಾರ್ಡ್‌ಗೆ ಹೋಗಿದೆ. ದಾಖಲೆಗೆ ಏನು ಹೋಗಿದೆ?

ಅಧ್ಯಕ್ಷರು: ಸ್ವಲ್ಪ ಇರಿ. ಇಲ್ಲಿ ನಾವು ಮಾಡಬೇಕಾಗಿರುವುದೇನೆಂದರೆ, ಲೋಕಾಯುಕ್ತ ತನ್ನ ದಾರಿಯನ್ನು ತಪ್ಪಿದೆ ಎನ್ನುವುದನ್ನು ಎತ್ತಿ ತೋರಿಸಿ. ಅಷ್ಟಕ್ಕೆ ಸೀಮಿತವಾಗಿ ಮಾತನಾಡಿ, ಯಾವಾಗಲೂ ವಿವರವಾಗಿ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಕೆ.ಜಿ. ಬೋಪಯ್ಯ: ಅದಕ್ಕೊಂದು ಉದಾಹರಣೆ ಕೊಟ್ಟೆ ಅಷ್ಟೆ.

ಅಧ್ಯಕ್ಷರು: Merit and demerit ಹೇಳುವುದಕ್ಕೆ ಹೋದ ತಕ್ಷಣ ವಿಪರೀತ ಆಗುತ್ತದೆ.

ಶ್ರೀ ಕೆ.ಜಿ. ಬೋಪಯ್ಯ: ನಾನು ಅದನ್ನು ಹೇಳಲೇ ಇಲ್ಲ. ಆದರೆ CAG report ಮೇಲೆ case ಮಾಡಿದ್ದಾರೆಂದು ನಾನು ಹೇಳಲೇ ಇಲ್ಲ. ಹೇಳಿದ

ನಂತರ CAG report ಅಥವಾ COD enquiry ಮೇಲೆ ಈ FIR ಮಾಡಿದ್ದಾರೆ ಎಂದು ಹೇಳಲೇ ಇಲ್ಲ. ನಾನು ಹೇಳಿದ್ದೇನೆಂದರೆ, condonaiton... limitation ಆದ ಐದು ವರ್ಷ ಸಮಯ.....

ಅಧ್ಯಕ್ಷರು: ಬೋಪಯ್ಯರವರೆ, ಅದೊಂದು ಶಾಸನಬದ್ಧವಾದ ಸಂಸ್ಥೆ. ಅದು ಯಾವುದೇ function ಮಾಡಿದರೂ ಶಾಸನದ ಅಧೀನದಲ್ಲಿ ಮಾಡಬೇಕಾಗುತ್ತದೆ. ನಿಮ್ಮ contention ಪ್ರಕಾರ ಅದು ಮಾಡುತ್ತಿಲ್ಲ. ಅದು violate ಆಗಿದೆಯೆನ್ನುವುದು. ಇಂತಹ ಸನ್ನಿವೇಶದಲ್ಲಿ ಸರ್ಕಾರ ಮತ್ತು ಶಾಸನಸಭೆ ಏನು ಮಾಡಬೇಕು ಎಂಬ ಬಗ್ಗೆ ಎತ್ತಿ ತೋರಿಸಿ.

ಶ್ರೀ ಕೆ.ಜಿ. ಬೋಪಯ್ಯ: ಅದಕ್ಕೊಂದು ಉದಾಹರಣೆ ಕೊಟ್ಟು ನಾನು ಹೇಳುತ್ತೇನೆ. ಅದಕ್ಕೆ ಅವಕಾಶ ಕೊಡಿ. ಅವರ ಮಧ್ಯೆ COD report ಮೇಲೆ ಮಾಡಿದ್ದಾರೆಂದು ಇಲ್ಲೊಂದು FIR ಅನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದಾರೆ.

ಅಧ್ಯಕ್ಷರು: ಆಯಿತು. ನಾವು ಇಲ್ಲಿ merit and demerit ಮೇಲೆ ಚರ್ಚೆ ಮಾಡುವುದು ಬೇಡ.

ಶ್ರೀ ಕೆ.ಜಿ. ಬೋಪಯ್ಯ: ನಾನು merit ಮೇಲೆ ಹೇಳಲೇ ಇಲ್ಲ.

ಅಧ್ಯಕ್ಷರು: ನಿಮ್ಮ ಪ್ರಕಾರ ಇದೊಂದು ಉದಾಹರಣೆ.

ಶ್ರೀ ಕೆ.ಜಿ. ಬೋಪಯ್ಯ: Investigation ಎಂದರೆ ಏನೆಂದು ಮೊದಲು ತಿಳಿದುಕೊಳ್ಳಿ. There is no merit ಎಂದು ನಾನು ಹೇಳಿದ್ದು. investigation ಮಾಡಲಿ ಯಾರು ಬೇಡವೆಂದು ಹೇಳಿದ್ದು. ನನ್ನ allegaiton.........

ಶ್ರೀ ಕೆ.ಜೆ. ಜಾರ್ಜ್: ಯಾರು accused ಇದ್ದಾರೆ, ಅವರು ಕೋರ್ಟ್‌ನಲ್ಲಿ ಹೋಗಿ protection ತೆಗೆದುಕೊಳ್ಳುವುದಕ್ಕೆ ಅವರಿಗೆ ಹಕ್ಕಿದೆ. ನಾವು ಮತ್ತು ನೀವು ಕುಳಿತು ಮಾಡುವುದಕ್ಕಾಗುತ್ತದೆಯೇ?

ಶ್ರೀ ಕೆ.ಜಿ. ಬೋಪಯ್ಯ: ಇವತ್ತು ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರಿಗೆ ಆಗಿದೆ. ಇದನ್ನು ಸುಮ್ಮನೆ ಬಿಟ್ಟರೆ ನಾಳೆ ನಮಗೂ ಕೂಡ ಇದೇ ಗತಿ.

ಶ್ರೀ ಕೆ.ಜೆ. ಜಾರ್ಜ್: ಹೌದು, ನಮಗೂ ಕೂಡ ಅದೇ ಗತಿ ಬರುತ್ತದೆ ಏನು ಮಾಡುವುದಕ್ಕಾಗುವುದಿಲ್ಲ. ತಪ್ಪು ಮಾಡಿದರೆ ಅದೇ ಗತಿ ಬರುತ್ತದೆ.

ಶ್ರೀ ಕೆ.ಜಿ. ಬೋಪಯ್ಯ: ನೀವು ಬೇಕಾದರೆ face ಮಾಡಿ. ನಾನು face ಮಾಡುವುದಕ್ಕೆ ತಯಾರಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನಾವೇನು ಮಾಡುವುದಕ್ಕಾಗುತ್ತದೆ. ನಾವು face ಮಾಡುತ್ತೇವೆ. ಯಾರೇ ತಪ್ಪು ಮಾಡಿದರೂ ಸಹ ಕಾನೂನು ಪ್ರಕಾರ face ಮಾಡಬೇಕಾಗುತ್ತದೆ.

ಶ್ರೀ ಕೆ.ಜಿ. ಬೋಪಯ್ಯ: ನೀವು ಇರಬಹುದು ನಾವು ಜನರಿಂದ ಆಯ್ಕೆಯಾಗಿ ಇಲ್ಲಿ ಬಂದಿರುವುದು. ಸುಳ್ಳು case ಹಾಕಿಸಿಕೊಳ್ಳುವುದಕ್ಕೆ ಬಂದಿಲ್ಲ.

ಶ್ರೀ ಕೆ.ಜೆ. ಜಾರ್ಜ್: ನಾವು ಕೂಡ ಜನರಿಂದ ಆಯ್ಕೆ ಆಗಿ ಬಂದಿರುವವರು.

ಶ್ರೀ ಕೆ.ಜಿ. ಬೋಪಯ್ಯ: ನೀವು ಆಯ್ಕೆಯಾಗಿದ್ದರೆ ಈ ಅನ್ಯಾಯವನ್ನು ಪ್ರತಿಭಟಿಸಿ.

ಶ್ರೀ ಕೆ.ಜೆ. ಜಾರ್ಜ್: ಭ್ರಷ್ಟಾಚಾರ ವಿಚಾರದಲ್ಲಿ ನಮ್ಮದೂ ಸಹ zero tolerance, ಇದನ್ನು ನಾವು ಒಪ್ಪಿಕೊಂಡಿಲ್ಲ (ಗೊಂದಲ) ಭ್ರಷ್ಟಾಚಾರ ಒಬ್ಬರ ವಿಚಾರವಲ್ಲ ಯಾರೇ ಭ್ರಷ್ಟಾಚಾರ ಮಾಡಿದರೂ ಕೂಡ ಅದು ಭ್ರಷ್ಟಾಚಾರವೇ. Investigation ನಡೆಯುತ್ತಿರುವಾಗ ನೀವು ಚರ್ಚೆ ಮಾಡಿದರೆ ನಾವು ಹೇಗೆ ಸರ್ಕಾರ ನಡೆಸುವುದು?

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಅವರಿಗೆ ನೀವು moral support ಕೊಡುವುದಿಲ್ಲ. You are defending the Lokayukta. ಲೋಕಾಯುಕ್ತರು ಈ ಕೆಲಸವನ್ನು ಮಾಡುತ್ತಿದ್ದಾರೆಂದು ನಾನು ಈಗ ನೇರವಾಗಿ ಆಪಾದನೆ ಮಾಡುತ್ತೇನೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನೋಡಿ ನಮಗೂ ಅದಕ್ಕೂ ಸಂಬಂಧವಿಲ್ಲ.

(ಗೊಂದಲ)

(ಈ ಹಂತದಲ್ಲಿ ಬಿಜೆಪಿಯ ಹಲವು ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಇದೊಂದು ಉದಾಹರಣೆ ಅಷ್ಟೆ.

ಶ್ರೀ ಕೆ.ಜೆ. ಜಾರ್ಜ್: ಸಂತೋಷ್ ಹೆಗಡೆ ವಿಚಾರವನ್ನು ಹೇಳಿದಿರಿ. ಸಂತೋಷ್ ಹೆಗಡೆಯವರನ್ನು ಲೋಕಾಯುಕ್ತರಾಗಿ ನೇಮಕ ಮಾಡಿದಾಗಲೆ ಭ್ರಷ್ಟಾಚಾರ.........

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ಎನ್ನುತ್ತಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಲೋಕಾಯುಕ್ತ ಸಂಸ್ಥೆಯಲ್ಲಿ ದುರುಪಯೋಗವಾಗಿದೆ. ಭ್ರಷ್ಟಾಚಾರವಾಗಿದೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಸಿ.ಬಿ.ಐ ತನಿಖೆ ಮಾಡಿಸಿ, ತನಿಖೆ ಆಗಲಿ, defend ಮಾಡುತ್ತೀರಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಲೋಕಾಯುಕ್ತ ನೇಮಕಾತಿಯಲ್ಲಿ ಭ್ರಷ್ಟಾಚಾರವಾಗಿದೆಯೆಂದು ಹೇಳುತ್ತಿದ್ದಾರೆ. ಯಾರು ಭ್ರಷ್ಟಾಚಾರ ಮಾಡಿದ್ದಾರೆಂದು ಹೇಳಲಿ.

(ಗೊಂದಲ)

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆಯಲಾಗಿದೆ)

ಶ್ರೀ ಕೆ.ಜಿ. ಬೋಪಯ್ಯ: ತನಿಖೆ ಮಾಡಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಕಾನೂನು ಪ್ರಕಾರ ಆಗುತ್ತದೆ.

(ಗೊಂದಲ)

ಶ್ರೀ ಸಿ.ಟಿ. ರವಿ: ತನಿಖೆಯಾಗಲಿ.

(ಗೊಂದಲ)

ಅಧ್ಯಕ್ಷರು: ಜಾರ್ಜ್‌ರವರೆ ಒಂದು ನಿಮಿಷ, ಬೋಪಯ್ಯರವರೆ ಒಂದು ನಿಮಿಷ ಇರಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಮಾತನಾಡುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

(ಗೊಂದಲ)

ಶ್ರೀ ಸಿ.ಟಿ. ರವಿ: ಲೋಕಾಯುಕ್ತರನ್ನು appoint ಮಾಡಿದವರ್ಯಾರು? ಯಾರು ಮಾಡಿದ್ದು?

(ಗೊಂದಲ)

ಶ್ರೀ ಕೆ. ಅಭಯಚಂದ್ರ: ನೇಮಕಾತಿ ಮಾಡಿದ್ದು ನೀವೇ.

(ಗೊಂದಲ)

ಅಧ್ಯಕ್ಷರು: ಬೋಪಯ್ಯನವರೇ, ಜಾರ್ಜ್ ಅವರೆ, ಒಂದು ನಿಮಿಷ ತಾಳಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನೇಮಕಾತಿಯಲ್ಲಿ ಆಗಿರುವುದನ್ನು ಅವರು ಹೇಳಿದರು.

(ಗೊಂದಲ)

ಶ್ರೀ ಸಂಜಯ್ ಬಿ ಪಾಟೀಲ್: ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತ ಸಂಸ್ಥೆ ಬಗ್ಗೆ....

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ತನಿಖೆ ಮಾಡಲಿ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್: ತನಿಖೆ ಮಾಡಲಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಯಾರು ಮಾತನಾಡಿದರು?

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಯಾರು ಹೇಳಿದ್ದು, ತನಿಖೆ ಮಾಡಿ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಲೋಕಾಯುಕ್ತರನ್ನು ನೇಮಕಾತಿ ಮಾಡಿದವರು ಯಾರು?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಅವರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ನಾವು ಅವರಿಗೆ ಅವಕಾಶವನ್ನು ಕೊಟ್ಟಿದ್ದೇವೆ. ಅವರು ಗಲಾಟೆ ಮಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು: ಸ್ವಲ್ಪ ತಾಳಿ, ಸುಮ್ಮನೆ ಕುಳಿತುಕೊಳ್ಳಿ. ಸಾಕು, ಮಾನ್ಯ ಸದಸ್ಯರಾದ ಸುರೇಶ್ ಕುಮಾರ್ ಅವರು ಮಾತನಾಡಿದರು. ಯಾರೊಬ್ಬರೂ ಸಹ ತುಟಿ ಪಿಟಿಕ್ ಎಂದು ಹೇಳಲಿಲ್ಲ. ಬಹಳ ಸಮಾಧಾನ ಮತ್ತು ಗೌರವದಿಂದ ಅವರ ಮಾತನ್ನು ಕೇಳಿದರು. ಆದರೆ ನೀವು ಪ್ರಚೋದನೆ ಕೊಟ್ಟು ಮಾತನಾಡುತ್ತಿದ್ದೀರಿ. ಹಾಗಾಗಿ ಈ ರೀತಿ ಗಲಾಟೆ ನಡೆಯುತ್ತಿದೆ. ದಯವಿಟ್ಟು ಸ್ಥಿಮಿತದಲ್ಲಿಟ್ಟುಕೊಂಡು ಗೌರವದಿಂದ ಮಾತನಾಡಿ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ನಾನು ಎಲ್ಲಿಯೂ ಇತಿ–ಮಿತಿ ಮೀರಿ ಮಾತನಾಡಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನೀವು ನೇರ ಆರೋಪವನ್ನು ಮಾಡಿದ್ದೀರಿ. ಸರ್ಕಾರದ ಮೇಲೆ ಏಕೆ ಈ ರೀತಿ ಮಾಡುತ್ತೀರಿ?

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ನಿಮ್ಮಿಂದ ಕಲಿಯಬೇಕಾಗಿರುವುದು ಏನಿಲ್ಲ. ಮಾನ್ಯ ಅಧ್ಯಕ್ಷರೆ, ಈ ರೀತಿ ಮಧ್ಯದಲ್ಲಿ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಇವರು ಮರ್ಯಾದೆಯಾಗಿ ಮಾತನಾಡಿಲ್ಲ. ನೀವು ಸ್ಪೀಕರ್ ಮತ್ತು ಡೆಪ್ಯೂಟಿ ಸ್ಪೀಕರ್ ಆಗಿ ಕೆಲಸ ಮಾಡಿದಂತಹವರು. ಸ್ಪೀಕರ್ ಆಗಿ ಈ ರೀತಿ ಮಾತನಾಡುವುದು ಸರಿಯಿಲ್ಲ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ನಿಮ್ಮಿಂದ ಕಲಿಯುವಂತಹದ್ದೂ ಏನಿಲ್ಲ.

(ಗೊಂದಲ)

ಶ್ರೀ ರಾಮಲಿಂಗಾರೆಡ್ಡಿ: ನೀವು ಸ್ಪೀಕರ್ ಆಗಿ ಈ ರೀತಿ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಮಾತನಾಡಿದರೆ ನಾಳೆ ನಿಮಗೂ ಇದೇ ಗತಿಯೇ?

(ಗೊಂದಲ)

ಶ್ರೀ ಆರ್.ವಿ. ದೇಶ್‌ಪಾಂಡೆ: ಮಾನ್ಯ ಅಧ್ಯಕ್ಷರೆ, ಇಲ್ಲಿ ಎಂದು ಹೇಳುವ ಅವಶ್ಯಕತೆಯಿದೆಯೇ? ಅದನ್ನು record ನಿಂದ ತೆಗೆದುಬಿಡಿ. ಏಕೆಂದರೆ ಎಂದು record ನಲ್ಲಿ ಇರಬಾರದು.

ಅಧ್ಯಕ್ಷರು: ತೆಗೆದು ಹಾಕುವಂತೆ ಹೇಳಿದ್ದೇನೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಹಾಗಾದರೆ ಬೋಪಯ್ಯನವರು ಕಾರಣವೆಂದು ಹೇಳಬಹುದೇ?

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ತನಿಖೆ ಮಾಡಿ ಸ್ವಾಮಿ. ಯಾವ ತನಿಖೆ ಬೇಕಾದರೂ ಮಾಡಿ.

(ಗೊಂದಲ)

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆಯಲಾಗಿದೆ)

ಶ್ರೀ ಕೆ.ಜಿ. ಬೋಪಯ್ಯ: ನಾನು ಕಾರಣ, ಮುಖ್ಯಮಂತ್ರಿಗಳು ಕಾರಣ, Chairman ಕಾರಣ ಎಲ್ಲರೂ ಕಾರಣ. ಆದ್ದರಿಂದ ನೀವು ತನಿಖೆ ಮಾಡಿ.

(ಗೊಂದಲ)

ಅಧ್ಯಕ್ಷರು: ಬೋಪಯ್ಯನವರೇ,

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಅವರು ಆ ರೀತಿ ಹೇಳಬಹುದೇ?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಬಸವರಾಜ ರಾಯರೆಡ್ಡಿ ಅವರೇ ಯಾರು ಕಾರಣ ಎಂದು ಎಲ್ಲರಿಗೂ ಗೊತ್ತಿದೆ "ಅಂಗೈ ಹುಣ್ಣಿಗೆ ಕನ್ನಡಿ ಬೇಕೆ". ಯಾರು ಕಾರಣರು ಎಂದು ಜಗತ್ತಿಗೆ ಗೊತ್ತಿದೆ.

(ಗೊಂದಲ)

ಶ್ರೀ ಕೆ. ಷಡಕ್ಷರಿ: ಸ್ಪೀಕರ್ ಆಗಿ ಕೆಲಸ ಮಾಡಿದ್ದೀರಿ. ಯಾವ ರೀತಿ ಮಾತನಾಡಬೇಕೆಂದು ಗೊತ್ತಿಲ್ಲವೇ?

(ಗೊಂದಲ)

ಅಧ್ಯಕ್ಷರು: ನಾವು ಒಂದು ಸನ್ನಿವೇಶದಲ್ಲಿದ್ದೇವೆ. ಲೋಕಾಯುಕ್ತ ಕಾನೂನನ್ನು ಮಾಡಿರುವುದೇ ಈ ಶಾಸನ ಸಭೆ. ಈ ಶಾಸನ ಸಭೆಯ......

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ರಾಯರೆಡ್ಡಿ ಅವರು ಅವರನ್ನು appoint ಮಾಡುವಾಗ ಯಾವ ರೀತಿಯ influence ಆಯಿತೆಂದು ಹೇಳಿದರು.

(ಗೊಂದಲ)

ಅಧ್ಯಕ್ಷರು: ಈಗ ಅದೆಲ್ಲಾ ಬೇಡ. ಸುಮ್ಮನಿರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ ರೀತಿ ವಾದ ಮಾಡಿದರೆ, ಏನು ಮಾಡಬೇಕು? ಒಂದು process ಮೇಲೆ ಅವರನ್ನು appointment ಮಾಡಲಾಗಿರುತ್ತದೆ. ಅವರ, ಇವರ ಪ್ರೆಷರ್ ಮೇಲೆ ಮಾಡಿದರು ಎಂದು ಹೇಳುತ್ತಾರೆ. ಈ ರೀತಿಯ ಆಪಾದನೆ ಮಾಡುವುದು ಸರಿಯೇ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಸಂತೋಷ್ ಹೆಗಡೆ ಎಂದು ಅವರೇ ಹೇಳಿದ್ದರು.

(ಗೊಂದಲ)

ಅಧ್ಯಕ್ಷರು: ಸಂತೋಷ್ ಹೆಗಡೆ ಹೇಳುತ್ತಾರೋ, ಯಾರು ಹೇಳುತ್ತಾರೋ ಅವರೇನು ಕಂಡಿದ್ದಾರಾ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅಂದು ಮುಖ್ಯಮಂತ್ರಿಗಳು, ಸ್ಪೀಕರ್, ವಿರೋಧಪಕ್ಷದ ನಾಯಕರು ಎಲ್ಲರೂ ಸೇರಿಯೇ ನೇಮಕಾತಿ ಮಾಡಿರುತ್ತಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಸಂತೋಷ್ ಹೆಗಡೆ ಅವರೇ ಸಿ.ಬಿ.ಐ.ಗೆ ಕೊಡಬೇಕೆಂದು ಹೇಳಿರುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅವರು ಒಳ್ಳೆಯವರು ಹಾಗೂ ಒಳ್ಳೆಯ ಕೆಲಸ ಮಾಡುತ್ತಾರೆಂದು ತೆಗೆದುಕೊಂಡಿರುತ್ತೇವೆ. ಅವರು ಮುಂದೆ corrupt ಆದರೆ ನಾವೇನು ಮಾಡುವುದಕ್ಕಾಗುತ್ತದೆ? Appointing authority…

(ಗೊಂದಲ)

ಅಧ್ಯಕ್ಷರು: ಯಾರ್‍ಯಾರು ಯಾವ ರೀತಿ ನೇಮಕ ಆಗಿರುತ್ತಾರೆಂದು ಎಲ್ಲರಿಗೂ ಗೊತ್ತಿರುತ್ತದೆ ಸುಮ್ಮನಿರಿ ಸಾಕು.

(ಗೊಂದಲ)

ಶ್ರೀ ಸಿ.ಟಿ. ರವಿ: ಅವರ ನೇಮಕಕ್ಕೆ ಮುಂಚಿತವಾಗಿ ಎರಡು ಹೆಸರುಗಳು ಬಂದಿದ್ದವು. ಕೆಲವು ಹೆಸರುಗಳನ್ನು ಅಂದಿನ ರಾಜ್ಯಪಾಲರು ಒಪ್ಪಲಿಲ್ಲ. ಇವರ ಹೆಸರನ್ನು ಮಾತ್ರ ಒಪ್ಪಿದ್ದರು. ಇವತ್ತಿನ ಮುಖ್ಯಮಂತ್ರಿಗಳೇ ಅಂದಿನ ವಿರೋಧ ಪಕ್ಷದ ನಾಯಕರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇವತ್ತು ಯಾವುದೂ ಸಹ influence ಆಗಿಲ್ಲ. Bonafide ನಿಂದ appointment ಆಗಿರುವುದು. ಅವರು ಸರಿಯಾಗಿ ಕೆಲಸ ಮಾಡಿಲ್ಲವೆಂದರೆ ಜವಾಬ್ದಾರಿ appointing authority ಅವರದು ತಪ್ಪಾಗುವುದಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: FIR ಬಂದಾಗ ಮಾತ್ರ ಅವರು ಸರಿಯಾಗಿ ಕೆಲಸ ಮಾಡಿಲ್ಲವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಮಗೂ ಇದಕ್ಕೂ ಸಂಬಂಧವಿಲ್ಲ. ಅವರು ಸರಿಯಾಗಿ ನಡೆಸಿಕೊಂಡು ಹೋಗಬೇಕು. ಸರಿಯಾಗಿ ನಡೆಸಿಕೊಂಡು ಹೋಗದೇ ಇದ್ದರೆ ಅವರ ತಪ್ಪು.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: FIR ಬಂದಾಗ ಮಾತ್ರ ತಪ್ಪಾಗಿರುವುದು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ರಾಯರೆಡ್ಡಿ ಅವರು ಮಾತನಾಡಿರುವುದಕ್ಕೆ ನಾವೆಲ್ಲಾ ಏಕೆ ಜಗಳವಾಡಬೇಕು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ನೇಮಕ ಮಾಡಿದ ಕೃರ್ತ ಬೇರೆ ಜಿಲ್ಲೆಯಲ್ಲಿ ಕುಳಿತಿದ್ದಾನೆ. ಇವರು ಸುಮ್ಮನೆ ಜಗಳವಾಡುತ್ತಾರೆ.

(ಗೊಂದಲ)

ಅಧ್ಯಕ್ಷರು: ರಾಯರೆಡ್ಡಿ ಅವರೆ ಸುಮ್ಮನಿರಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತ ಪ್ರಶ್ನೆ ಬಂದಂತಹ ಸಂದರ್ಭದಲ್ಲಿ, ನಾವು ಎಲ್ಲಾ ಸಂದರ್ಭದಲ್ಲಿಯೂ ಸಂತೋಷ್ ಹೆಗಡೆ ಅವರ ಮಾತನ್ನು ಪ್ರತಿವಾದನೆ ಮಾಡಿ, ಅದನ್ನು ಆಧರಿಸಿ ಮಾತನಾಡಿರುವುದುಂಟು. ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿ, ಲೋಕಾಯುಕ್ತರಾಗಿದ್ದಂತಹವರು interview ನಲ್ಲಿ specific ಆಗಿ ಹೇಳುತ್ತಾರೆ. ಬೇರೆಯವರ ಮಾತನ್ನು ಬಿಡಿ. My conscious is clear. But what about the gentlemen, the rumour is that, he paid money and came to this post Authoritatively, he says ಇದನ್ನು ಯಾರು ಹೇಳಬೇಕು? ಸಂತೋಷ್ ಹೆಗಡೆ ಅವರೇ ಹೇಳಬೇಕಾಗುತ್ತದೆ. ಅಥವಾ ಆ ಅವಧಿಯಲ್ಲಿದ್ದಂತಹವರು

ಹೇಳಬೇಕಾಗುತ್ತದೆ. ಆದರೆ ಇಲ್ಲಿ ಗೂಬೆ ಕೂರಿಸಿದ್ದು ಯಾರ ಮೇಲೆ? ಯಾರು ಇದನ್ನು ಸಾಬೀತುಪಡಿಸಬೇಕು?

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಇದರ ಬಗ್ಗೆ ಸಿ.ಬಿ.ಐ. ತನಿಖೆಯಾಗಬೇಕು.

(ಗೊಂದಲ)

ಶ್ರೀ ಸಂಜಯ್ ಬಿ. ಪಾಟೀಲ್: ಸಿ.ಬಿ.ಐ. ತನಿಖೆ ಆಗಲಿ.

(ಗೊಂದಲ)

ಶ್ರೀ ಸಿ.ಟಿ. ರವಿ: ಸಿ.ಬಿ.ಐ. ತನಿಖೆ ಆಗಬೇಕು.

(ಗೊಂದಲ)

ಶ್ರೀ ಕೆ. ಅಭಯಚಂದ್ರ: ಯಾರು ಅನುಮಾನಿಸಿರುವುದು?

(ಗೊಂದಲ)

ಶ್ರೀ ಸಿ.ಟಿ. ರವಿ: ಸಂತೋಷ್ ಹೆಗಡೆ ಅವರ ಮಾತನ್ನು ಯಾರು ಅನುಮಾನಿಸತಕ್ಕದ್ದಲ್ಲ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಸಿ.ಬಿ.ಐ. ತನಿಖೆಗೆ ಕೊಡಲಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಸಿ.ಬಿ.ಐ. ತನಿಖೆಯಾಗಲೇಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಎಲ್ಲಾ ವಿಚಾರದಲ್ಲೂ ಒಪ್ಪುವವರು, ಈ ಪ್ರಶ್ನೆ ಬಂದಾಗ ಇವರು ಏಕೆ ಒಪ್ಪುತ್ತಿಲ್ಲ? ಇದಕ್ಕೆ ಕಾರಣ ಯಾರು? ಆವತ್ತಿನ ದಿವಸ appointing authorities ಯಾರಿದ್ದರೋ ಅವರ ಮೇಲೆ ಹೂರಿಸಿರುವ ಆರೋಪ ಅಲ್ಲವೇ?

(ಗೊಂದಲ)

ಶ್ರೀ ಸಿ.ಟಿ. ರವಿ: ಇದು ಅಕ್ಷಮ್ಯ ಅಪರಾಧ?

(ಗೊಂದಲ)

ಅಧ್ಯಕ್ಷರು: ಚರ್ಚೆಗೆ ಅವಕಾಶವಿಲ್ಲ. ಈಗ House ಅನ್ನು adjourn ಮಾಡಬೇಕಾಗುತ್ತದೆ. ಇಲ್ಲಿ ಸಮಸ್ಯೆ ಪೂರೈಸುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಸಿ.ಟಿ. ರವಿ: ಸಿ.ಬಿ.ಐ.ಗೆ ಕೊಟ್ಟರೆ ಯಾರು ಏನು ಮಾಡಿದ್ದಾರೆಂದು ಗೊತ್ತಾಗುತ್ತದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಸಿ.ಬಿ.ಐ. ಅವರನ್ನು ವಿರೋಧ ಪಕ್ಷದ ಮನೆಯಲ್ಲಿ ಇಟ್ಟುಬಿಡಿ.

(ಗೊಂದಲ)

ಅಧ್ಯಕ್ಷರು: ಲೋಕಾಯುಕ್ತದ ಪ್ರಕಾರ under what provision ಕೊಡುವುದಕ್ಕೆ ಅವಕಾಶ ಇದೆ ಎನ್ನುವುದನ್ನು point out ಮಾಡಿ ತೋರಿಸಿ. ಮಾನ್ಯ ಮುಖ್ಯಮಂತ್ರಿಗಳು ಕಾನೂನಿನಲ್ಲಿ ಅವಕಾಶ ಎಲ್ಲಿದೆ ಎನ್ನುವುದನ್ನು ತೋರಿಸಿ ಎಂದು ಹೇಳುತ್ತಾರೆ. ತೋರಿಸಿ ಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾವು ಸಹ ಅದನ್ನೇ ರೆಫರ್ ಮಾಡಿ ಎಂದು ಹೇಳುತ್ತಿದ್ದೇವೆ. ಅಶ್ವಿನ್ ಮೇಲೆ FIR ಆಗಿದೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲವೆಂದು ಹೇಳುತ್ತೀರಾ;

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ರಾಮಲಿಂಗಾರೆಡ್ಡಿ ಅವರೇ, ನಾನು ಅದನ್ನು ಹೇಳಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಅಶ್ವಿನ್ ರಾವ್ ಅವರ ಮೇಲೆ FIR ಮಾಡಿರುವುದು ಯಾರು? ಲೋಕಾಯುಕ್ತ ಸಂಸ್ಥೆಯಿಂದ ಮಾಡಿರುವುದು. ನಮ್ಮ ಪೊಲೀಸ್‌ನವರು FIR ಹಾಕಿದ್ದಾರೆಯೇ? SIT ಅವರು ಇನ್ನೂ ಹಾಕಿಲ್ಲ. ಈಗ ತನಿಖೆ ಪ್ರಾರಂಭ ಮಾಡಿದ್ದಾರೆ. ಲೋಕಾಯುಕ್ತ ಪೊಲೀಸ್‌ನವರು ಅಶ್ವಿನ್‌ರಾವ್ ಮೇಲೆ FIR ಹಾಕಿದ್ದಾರೆ. Complainant ಕೃಷ್ಣಮೂರ್ತಿ ಅವರ ಮೇಲೆ ಹಾಕಿದ್ದಾರೆ. ನಮ್ಮ ಪೊಲೀಸ್ ನವರು ಹಾಕಿಲ್ಲ. ಒಂದು ವೇಳೆ ನಮ್ಮ ಪೊಲೀಸ್ ಅವರ ಹತ್ತಿರ case register ಆಗಿದ್ದರೆ, ನಾವು immediate ಆಗಿ ಅವರನ್ನು ಅರೆಸ್ಟ್ ಮಾಡುವ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೆವು. But it is a matter within the Lokayukta only. FIR ಸಹ ಲೋಕಾಯುಕ್ತ ಪೊಲೀಸ್‌ನವರು ಹಾಕಿರುವುದು. ಈಗಾಗಲೇ ಅಶ್ವಿನ್‌ರಾವ್ ಅವರು ಕೋರ್ಟ್‌ಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ನಮಗೆ ಅದರ ಸಂಬಂಧವಿಲ್ಲ. ಅಶ್ವಿನಿರಾವ್ ಅಥವಾ ಇತರರ ಮೇಲೆ ನಮ್ಮ ಪೊಲೀಸ್ ಅವರ ಹತ್ತಿರ complaint ಇದ್ದಿದ್ದರೆ ಕೂಡಲೇ accused ಯಾರಿದ್ದರೋ ಅವರನ್ನು ಅರೆಸ್ಟ್ ಮಾಡುತ್ತಿದ್ದೆವು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈಗ ಅಸಹಾಯಕತೆಯನ್ನು ಪ್ರದರ್ಶನ ಮಾಡಿ...

(ಗೊಂದಲ)

ಶ್ರೀ ಸಿದ್ದರಾಮಯ್ಯ: ಹಿಂದೆ ಮುಂದೆ ನೋಡದೆ ಮಾಡುತ್ತಿದ್ದೆವು. ನೀವು ಲಾಯರ್ ಕೆಲಸ ಮಾಡಿದವರು.

(ಗೊಂದಲ)

ಅಧ್ಯಕ್ಷರು: ಅವರು ಉತ್ತರ ಹೇಳಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ತಿದ್ದುಪಡಿ ಮಾಡಿ ಎಂದು ಹೇಳಿದ್ದೇವೆ.

(ಗೊಂದಲ)

ಅಧ್ಯಕ್ಷರು: ಅದನ್ನು ಸಜೆಸ್ಟ್ ಮಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾನು ಅದನ್ನು ಮೊನ್ನೆಯೇ suggest ಮಾಡಿದ್ದೇನೆ. Power ತೆಗೆದುಕೊಳ್ಳಬೇಕಾದರೆ ಒಂದು amendment ಮಾಡಿ. ಬೆಳಗಾವಿ ಅಧಿವೇಶನದಲ್ಲಿಯೂ ಸಹ amendment ಮಾಡಿಯೆಂದು ಹೇಳಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: We will bring the amendment.

(ಗೊಂದಲ)

ಅಧ್ಯಕ್ಷರು: ಅದರ ಬಗ್ಗೆ ಆವತ್ತು ಹೇಳಿದರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಹೇಳಿದರೂ ಏನಾಯಿತು? ಸೋಮವಾರ, ಮಂಗಳವಾದರೂ ಏನೂ ಆಗಿಲ್ಲ.

(ಗೊಂದಲ)

ಅಧ್ಯಕ್ಷರು: ನಾನು ಹೇಳುವವರೆಗೂ ಕೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇವತ್ತು ಹೇಳಿದ ತಕ್ಷಣ ನಾಳೆಯೇ ಜಾರಿಗೆ ತಂದು ಬಿಡುವುದಕ್ಕಾಗುತ್ತದೆಯೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಜರೂರು ಮತ್ತು ತುರ್ತಾಗಿದ್ದಂತಹ ಸಂದರ್ಭದಲ್ಲಿ ತರಬೇಕಾಗುತ್ತದೆ. ಮನಸ್ಸೇ ಇಲ್ಲವೆಂದರೆ ಏನು ಮಾಡುವುದಕ್ಕಾಗುತ್ತದೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ: We have to look out at the Government, ನೀವು ಹೇಳಿದ ಹಾಗೆ ಕೇಳುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಈ. ತುಕಾರಾಂ: ಮಾನ್ಯ ಅಧ್ಯಕ್ಷರೆ. ಸ್ಪೀಕರ್ ಆದವರು ಈ ರೀತಿ ಹೇಳಿದರೆ ಹೇಗೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅದಕ್ಕೆ ನೀವು ತೆಗೆದುಕೊಳ್ಳಿ ಎಂದು ಹೇಳುತ್ತಿರುವುದು.

(ಗೊಂದಲ)

ಅಧ್ಯಕ್ಷರು: ಆಗ ಮಸೂದೆಯನ್ನು ಬೇರೆ ತಿದ್ದುಪಡಿಯಲ್ಲಿ ತರುತ್ತೇವೆಂದು ವಾಪಸ್ಸು ತೆಗೆದುಕೊಳ್ಳಲಿಲ್ಲವೇ? ಇದು ಹಾಗೆಯೇ. They are at it.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ,

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಕೋರ್ಟಿನಿಂದ ಸ್ಟೇ ಇರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಲೋಕಾಯುಕ್ತ FIR ಮೇಲೆ ಕ್ರಮವನ್ನೇನು ತೆಗೆದುಕೊಳ್ಳಬಾರದೆಂದು ಕೋರ್ಟಿನಲ್ಲಿ ಸ್ಟೇ ಇದೆ. ಈಗ including that FIR report has been filed to SIT by the Lokayukta Police it has been given to the SIT.(ಗೊಂದಲ) SIT ಕ್ರಮ ತೆಗೆದುಕೊಳ್ಳಬೇಕಲ್ಲವೇ? SIT form ಮಾಡಿ 10–12 ದಿವಸಗಳಾಗಿದೆ. ಈಗ ಏನಾಗಿದೆ? ಏಕೆ ನೀವು ಅವರಿಗೆ ಇಷ್ಟೊಂದು ಡಿಲೇ ಕೊಟ್ಟಿದ್ದೀರಿ. ಬೇರೆ ಕೇಸ್‌ನಲ್ಲಿ ಈ ರೀತಿ ಕೊಡುತ್ತಿದ್ದೀರಾ? ಈಗ ಅವರು interview ಮತ್ತು ಎಲ್ಲವನ್ನು ಮಾಡಿದ್ದಾರೆ. SIT ಪ್ರಾರಂಭದಲ್ಲಿಯೇ you are indicating that you don't have intension. SIT ಗೆ ಅರೆಸ್ಟ್ ಮಾಡಬಾರದೆಂದು ಹೈಕೋರ್ಟಿನವರು ಎಲ್ಲಿಯೂ ಹೇಳಿಲ್ಲ. SIT ಕ್ರಮ ತೆಗೆದುಕೊಳ್ಳಬಾರದೆಂದು ಹೈಕೋರ್ಟ್‌ನವರು ಎಲ್ಲಿಯೂ ಹೇಳಿಲ್ಲ. SIT ಅವರು ಏನು ಬೇಕಾದರೂ ಕ್ರಮ ತೆಗೆದುಕೊಳ್ಳಬಹುದು. ಹೈಕೋರ್ಟ್ restriction ಇಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: they will take a decision.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಹೈಕೋರ್ಟ್‌ನವರು ಆ ರೀತಿ ಎಲ್ಲಿ ಹೇಳಿದ್ದಾರೆ?

(ಗೊಂದಲ)

ಶ್ರೀ ಸಿ.ಟಿ.ರವಿ: ಸಾರ್ವಜನಿಕ ವಿಶ್ವಾಸಾರ್ಹತೆಯನ್ನು (ಗೊಂದಲ)..... ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: 10 ದಿನದಿಂದ SIT ಏನು ಮಾಡಿದೆ; ಅದಕ್ಕೇ ಈ doubt ಬರುತ್ತಿರುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ: Doubt ಏಕೆ ಬರುತ್ತದೆ?

(ಗೊಂದಲ)

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ವಿಶ್ವಾಸಾರ್ಹತೆಯನ್ನು (ಗೊಂದಲ)... ಸರ್ಕಾರ ಏನು· ಕ್ರಮ ಕೈಗೊಳ್ಳುತ್ತದೆ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ನೀವು ಹತ್ತು ದಿವಸದಿಂದ SIT ಏನು ಕ್ರಮ ತೆಗೆದುಕೊಂಡಿದ್ದೀರಿ? ಇದಕ್ಕೇ doubt ಬರುತ್ತಿರುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ: Doubt ಯಾಕ್ರೀ ಬರುತ್ತದೆ?

ಶ್ರೀ ಟಿ.ಬಿ. ಜಯಚಂದ್ರ: ಇವರು ಹೇಳುತ್ತಿರುವ ಮಾತಿನಲ್ಲಿ, ಆರೋಪವಲ್ಲಿ ಏನಾದರೂ ಸತ್ಯ ಇದೆಯೇ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: 10 ದಿವಸಗಳಿಂದ ಏನು ಮಾಡದೇ ಇರುವುದೇ doubt. ನೀವು ಏನು ಹೇಳಿದಿರಿ, ನಮ್ಮ ಮುಂದೆ ಕಂಪ್ಲೇಂಟ್ ಕೊಟ್ಟಿದ್ದರೆ ನಾವು 24 ಗಂಟೆಗಳಲ್ಲಿ arrest ಮಾಡುತ್ತೇವೆ. SIT ಮಾಡಿ ಹತ್ತು ದಿವಸಗಳಾಯಿತು. ಏಕೆ ಮಾಡಿಲ್ಲ ನೀವು?

(ಗೊಂದಲ)

ಅಧ್ಯಕ್ಷರು: ಬೊಮ್ಮಾಯಿಯವರೆ, ಒಂದು ನಿಮಿಷ ನಾನು ಹೇಳುತ್ತಿರುವುದನ್ನು ಕೇಳಿ. ಆ FIRನ್ನು ಕಳುಹಿಸಿ ಕೊಡಿ ಎಂದು Registrarಗೆ ನಮ್ಮ ಆಫೀಸ್‌ನಿಂದ ಒಂದು ಲೆಟರ್ ಕಳುಹಿಸಿದ್ದೆನು. ಅವರಿಂದ ನಿನ್ನೆ reply ಬಂದಿದೆ. ಎಲ್ಲವನ್ನೂ SITಗೆ handover ಮಾಡಿದ್ದೇವೆಂದು ಹೇಳಿದ್ದಾರೆ. ಈಗ ಇದು ನಮ್ಮ ಕೈಯಲ್ಲಿಯೇ ಇದೆ ನೋಡಿ.

(ಗೊಂದಲ)

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಭಾಸ್ಕರ್ ಎನ್ನುವವನು ಟಿ.ವಿ.ಗೆ interview ಕೊಡುತ್ತಾನೆ, ಯಾರ್ಯಾರು ಏನೇನು, ಯಾರ್ಯಾರು ಹಣ ಕೊಡ್ತಿದ್ದಾರೆ, ಯಾರ್ಯಾರು ಹಣ ಕೊಟ್ಟಿದ್ದಾರೆ, ಎಲ್ಲವನ್ನೂ ಕೊಟ್ಟಿದ್ದಾನೆ, ಇದು ಸಾಕಾಗುವುದಿಲ್ಲವೇ ಸಾಕ್ಷಿ?

(ಗೊಂದಲ)

ಶ್ರೀ ಕೆ. ಶಿವಮೂರ್ತಿ: ಲೋಕಾಯುಕ್ತ ಆಕ್ಟ್ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇವರು ಆರೋಪ ಮಾಡುವುದರಲ್ಲಿ ಏನಾದರೂ ಸತ್ಯ ಇದೆಯೇ? ಇವರು ಯಾರು ಬೇಕಾದರೂ ನಿಂತು ಮಾತನಾಡಬಹುದೇ ಇದನ್ನು?

(ಗೊಂದಲ)

ಅಧ್ಯಕ್ಷರು: Law Minister ಮಾತನಾಡುತ್ತಿದ್ದಾರೆ, ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇದನ್ನು ಹೈಕೋರ್ಟಿನಲ್ಲಿ Complaint Orders ಏನೆಂದು ಆಗುತ್ತದೆಂದರೆ, "As the complainant is now against the officials of Lokayukta itself, as observed by the

Lokayukta, it is appropriate that it is conducted by an outside agency on the request of the Lokayukta, State Government has acted and appointed a Special Investigation Team in order to avoid the conflicting finding it is appropriate that both Lokayukta and Upa-Lokayukta shall not direct any in-House investigation and await the report of the Special Investigation Team appointed by the State Government of Karnataka in this regard".ನಾವು ಹೇಳುವವರೆಗೂ ನೀವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಬೊಮ್ಮಾಯಿಯವರೆ, ನೀವು senior member ಆಗಿ ಈ ರೀತಿ ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ದಿನಾಂಕ: 01.07.2015 ರಂದು 12 ಗಂಟೆಗೆ FIR ಆಗುತ್ತದೆ. 1 ಗಂಟೆ ಅಥವಾ 2 ಗಂಟೆ ಸುಮಾರಿಗೆ ಹೈಕೋರ್ಟಿನಿಂದ stay ಬರುತ್ತದೆ. ಈಗ ತಾವು ಹೇಳಿದಿರಿ, ಈಗ SIT ವ್ಯಾಪ್ತಿಯಲ್ಲಿದೆ, Yes, it is duty bound, we have to take up.

(ಗೊಂದಲ)

ಅಧ್ಯಕ್ಷರು: ಹೌದು, ಈಗ ಏನು ಬೇಕಾದರೂ ಮಾಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಆ ರೀತಿಯಲ್ಲ, SITಗೆ ಕ್ರಮ...

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಈಗ Chief Minister ಮತ್ತು Opposition Leader ಬಹಳ ಜಾಣರಿದ್ದಾರೆ. ಜಯಚಂದ್ರರವರು Hon'ble Law Minister, ಸಂತೋಷ್ ಹೆಗಡೆಯವರ

interview ಓದಿ, My conscience is clear, there is a rumour, there is some consideration for his being appointed. ಆಗ Collegium ನಲ್ಲಿದ್ದವರು Chief Minister, Opposition Leader ಈಗ roles change ಆಗಿದೆ. ಇವರು ಅಲ್ಲಿಗೆ ಹೋಗಿದ್ದಾರೆ. ನನಗೆ rate ಏನು ಎಂದು ಗೊತ್ತಾಗಲೇ ಇಲ್ಲವಲ್ಲ.

(ಗೊಂದಲ)

ಅಧ್ಯಕ್ಷರು: ಆಗ ಅವರನ್ನೇ ಕರೆಸಬೇಕು.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಇವರು ಇಬ್ಬರೂ ಎಷ್ಟು ಬುದ್ಧಿವಂತರಿದ್ದಾರೆ, ಬೇರೆ ಎಲ್ಲಾ ವಿಷಯಗಳನ್ನು ತೆಗೆದು ಗಲಾಟೆ ಮಾಡಿ.......

(ಗೊಂದಲ)

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಇವರಿಬ್ಬರ ಮೇಲೆ ಇನ್ನೊಬ್ಬರು ಹೆಡ್ ಮಾಸ್ಟರ್ ಇದ್ದರು, ಅವರನ್ನು ಕೇಳಿದರೆ rate ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೇಂದರೆ, by chance ನಾಳೆ ನಾವು ಆ ಸ್ಥಾನಕ್ಕೆ ಬಂದರೆ ಒಂದು index ಆದರೂ ಇರಬೇಕಲ್ರೀ, ನಾವು ನಿಮ್ಮ guidance ಕೇಳುತ್ತಿರುವುದು, ಇಬ್ಬರೂ ಮಾತನಾಡಿಕೊಂಡು ಸ್ವಲ್ಪ ಏನು ಇದೆ ಎನ್ನುವುದನ್ನು ನಮಗೆ ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇದು ಒಂದು ಬೇಕಾದರೆ CBIನಿಂದ ತನಿಖೆಯಾಗಿ ಬಿಡಲಿ. Rate ಎಷ್ಟು fix ಆಗಿದೆ, ಏನು ಎನ್ನುವುದೂ

ಸಹ ತನಿಖೆಯಾಗಿ ಬಿಡಲಿ. ಯಾರಿಗೆ payment ಆಗಿದೆ, ಏನು ಎನ್ನುವುದು ಸಹ ಅದು ಒಂದು ಸಲ clear ಆಗಿ ಬಿಡಲಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ: ಲೋಕಾಯುಕ್ತವನ್ನೇ ನೀವು ನಂಬುವುದಿಲ್ಲ ವೆಂದರೆ, ಇನ್ನು ನೀವು CBIಗೆ ನಂಬುತ್ತೀರಾ?

(ಗೊಂದಲ)

ಅಧ್ಯಕ್ಷರು: ಆಯಿತು, ಸಾಕು. ಬೇಗ ಪೂರೈಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇವರಿಗೆ ಏನಾಗುತ್ತಿದೆಯೆಂದರೆ, ಸಂತೋಷ್ ಹೆಗಡೆಯವರು ಅವರ interviewನಲ್ಲಿ ಹೇಳಿಬಿಟ್ಟಿದ್ದಾರೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಅದಕ್ಕೆ ಅದನ್ನು ಗಂಭೀರವಾಗಿ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವರು ಹೇಳದೇ ಹೋಗಿದ್ದರೆ ಇಷ್ಟೊಂದು ಬರುತ್ತಿರಲಿಲ್ಲ. ಸಂತೋಷ್ ಹೆಗಡೆಯವರು ನೀವೂ member ಇದ್ದೀರಿ, ಎಂದರೆ recommend ಮಾಡುವವರು Government, ನಮ್ಮನ್ನು consult ಅಷ್ಟೇ ಮಾಡುವುದು.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾವು ಹೇಳುವುದು ನಿಮಗೆ main portion ಬಂದಿಲ್ಲದೇ ಇದ್ದರೂ tips ಏನಾದರೂ ಬಂದಿರಬಹುದಲ್ಲ? ಅದನ್ನು ನಮಗೆ ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಹೇಳ್ರೀ ಜಗದೀಶ್ ಶೆಟ್ಟರೇ.........

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇದು ನಮ್ಮ knowledge ನಲ್ಲಿಯೂ ಇಲ್ಲ, ನಿಮ್ಮ knowledge ನಲ್ಲಿಯೂ ಇಲ್ಲ. ಅದಕ್ಕೆ ಇದಕ್ಕೆ ಎಲ್ಲಿ ಹೋಗಿದೆ payment ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಎಲ್ಲಿ ಹೋಗಿದೆ ನೋಡಿ ಹುಡುಕಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಮ್ಮ knowledge ಗೂ ಇಲ್ಲ, ನಿಮ್ಮ knowledge ಗೂ ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅಲ್ಲ, ನಿಮ್ಮ knowledge ಗೇನಾದರೂ ಇದೆಯೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಹೇಳುತ್ತಿದ್ದೇನೆ, ಈಗ ಯಾರಿಗೆ ಹೋಗಿದೆ payment?

(ಗೊಂದಲ)

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಇಲ್ಲ, ನಮ್ಮ ಜಗದೀಶ್ ಶೆಟ್ಟರ್ ರವರು ಅಸಹಾಯಕರಿದ್ದಾರೆ, ವಿಷಯ ಈಗ ಗೊತ್ತಾಗಿದೆ, ನೀವು ಸರ್ಕಾರ ನಡೆಸುತ್ತಿರುವವರು, ಎಲ್ಲಿ ಹೇಗಿದೆ ಎಂದು ಪತ್ತೆ ಹಚ್ಚಿ ಹೇಳಿ. ...

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಊರು ತುಂಬಾ ಬ್ರಾಹ್ಮಣರೇ, ಕೋಳಿ ಮಾತ್ರ ಪತ್ತೆ ಇಲ್ಲ, ಹೆಂಗೆ ಇದು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಅದಕ್ಕೊಂದು special team ನ್ನೇ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಸಂತೋಷ್ ಹೆಗಡೆಯವರೇ ಹೇಳಬೇಕು. Payment ಯಾರಿಗೆ ಹೋಗಿದೆ ಎಂದು, Payment ಜಗದೀಶ್ ಶೆಟ್ಟರ್‌ಗೆ ಹೋಗಿದೆಯೇ? Chief Whip ಆಗಿದ್ದವರು,

(ಗೊಂದಲ)

ಅಧ್ಯಕ್ಷರು: ನೋಡಿ, ಅವರು Supreme Court Judge, ಲೋಕಾಯುಕ್ತ, ಲೋಕದಲ್ಲೇ ಅವರು......

(ಗೊಂದಲ)

ಶ್ರೀ ಸಿದ್ದರಾಮಯ್ಯ: ಆಯುಕ್ತ, ಲೋಕಕ್ಕೇ ಆಯುಕ್ತ.

(ಗೊಂದಲ)

ಅಧ್ಯಕ್ಷರು: ಅವರೇ ಹೇಳಬೇಕು, ಸತ್ಯ ಏನು ಎಂದು ಹೇಳಲೇಬೇಕು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಬೀದಿಗೆ ಹೋಗಿ ಪ್ರತಿಭಟನೆಯನ್ನೂ ಮಾಡುತ್ತಾರೆ.

(ಗೊಂದಲ)

ಅಧ್ಯಕ್ಷರು: ಅದು ಬೇರೆ ಮಾತು ರೀ. ಸತ್ಯ ಹೇಳುವುದಕ್ಕೇನ್ರೀ, ಆಯಿತು ನೀವು ಮಾತಾಡಿ ಬೇಗ ಮುಗಿಸಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಹೇಳುತ್ತೇನೆ. ಇದೇ subject ಮೇಲೆ, ಕಾಯಿದೆಯನ್ನೂ ದುರುಪಯೋಗ ಮಾಡುತ್ತಿದ್ದಾರೆನ್ನುವುದಕ್ಕೆ ಇನ್ನೂ ಒಂದು example ಹೇಳುತ್ತೇನೆ. ನಾನು details ಹೇಳುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಅದೆಲ್ಲಾ ಬೇಡ ರೀ. ನಾನು ಹೇಳುವವರೆಗೆ ಕೇಳಿ. ಈ ಸನ್ನಿವೇಶ ಇದೆ, ಈಗ ಸರ್ಕಾರ ಏನು ಮಾಡಬೇಕೆನ್ನುವುದನ್ನು ಹೇಳಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಅದನ್ನೂ ಹೇಳುತ್ತೇನೆ. ಈಗ ಸೆಕ್ಷನ್ 7 ನಲ್ಲಿಯೂ ಈ ಬಗ್ಗೆ ಲೋಕಾಯುಕ್ತದ ಮುಂದೆ ಒಂದು complaint ಹೋಗಿತ್ತು. ಆಗ ಒಬ್ಬರು ವ್ಯಕ್ತಿಗಳು ಬೇರೆ.

(ಗೊಂದಲ)

ಅಧ್ಯಕ್ಷರು: ಆ details ಎಲ್ಲಾ ಬೇಡ್ರೀ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ನಾನು details ಹೇಳಲೇ ಇಲ್ಲವಲ್ಲ. ಓದುವುದಾದರೆ 3 page ನಷ್ಟಿದೆ. ನಾನು ಓದುವುದಿಲ್ಲ. ಅಲ್ಲಿ ಒಬ್ಬರು complainant ಆರ್.ಎಸ್.ಎನ್.ಗೌಡ, Commander in Chief, ಕರ್ನಾಟಕ ರಣಧೀರ ಪಡೆ. ಅವರು ಲೋಕಾಯುಕ್ತಕ್ಕೆ conclusion ಹೇಗೆ ಬಂದಿದ್ದಾರೆಂದರೆ, ಇಲ್ಲಿ "Further, the complainant has impleaded the Chief Minister as respondent though the Chief Minister as respondent though the Chief Minister may have recommending authority to de-notify the land or the officers of the concerned Department who are not made parties to this complaint. The documents produced by the

complainant disclose the recommendation of the Chief Minister to de-notify the land, but the authority de-notify does not..."

(ಗೊಂದಲ)

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, ಡಿನೋಟಿಫೈ ಗೂ ಇದಕ್ಕೂ ಏನು ಸಂಬಂಧ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಏನು ಸಂಬಂಧ ಎನ್ನುವುದನ್ನು ಹೇಳಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳಿದೆನೆಂದರೆ, ಸೆಕ್ಷನ್ 7 & 8 ಅದರಲ್ಲಿ ಹೇಗೆ ಇವರು.........

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅಲ್ಲ, In what way it is concerned with this subject. No, it is not at all concerned.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ನೀವು ಕೇಳಲಿಲ್ಲ. ನಾನು ಹೇಳುತ್ತೇನೆ. ನಾನು ಹೇಳಿದ್ದನ್ನು ಕೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಸುಮ್ಮನೆ ಯಾವ್ಯಾವುದನ್ನೋ ಎಳೆದುಕೊಂಡು ಬಂದು ಏಕೆ ಹೇಳುತ್ತೀರಿ?

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳಿದೆನೆಂದರೆ, ಲೋಕಾಯುಕ್ತ constitute ಆದ ಮೇಲೆ ಅವರಿಗೆ ಸೆಕ್ಷನ್ 7 ಪ್ರಕಾರ ಯಾವುದನ್ನು receive ಮಾಡಬೇಕು, ಸೆಕ್ಷನ್ 8ರ ಪ್ರಕಾರ ಯಾವುದನ್ನು receive ಮಾಡಬಾರದು ಎನ್ನುವುದಕ್ಕೆ limitation ಇದೆ. ಎಲ್ಲವನ್ನೂ violate ಮಾಡಿ ಇವತ್ತು ಲೋಕಾಯುಕ್ತ ಕೆಲಸ ಮಾಡುತ್ತಿದೆ. ಅದಕ್ಕೆ, ನಾನು example ಹೇಳಿದೆ. ನೀವು ಕುಳಿತುಕೊಂಡೇ ಅಲ್ಲಿಂದ ಮಾತನಾಡುವುದಾದರೆ, ನಾನೇನು ಮಾಡುವಂತೆ ಇಲ್ಲ.

(ಗೊಂದಲ)

ಅಧ್ಯಕ್ಷರು: ಆಯಿತು ಹೇಳಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, in what way it is concerned. To remove the ಲೋಕಾಯುಕ್ತಕ್ಕೂ ಇದಕ್ಕೂ ಏನು ಸಂಬಂಧ? To remove the Lokayukta... ಅಧ್ಯಕ್ಷರೆ, remove ಮಾಡಲಿಕ್ಕೆ ಇದರಲ್ಲಿ ಏನೂ ಪ್ರಯೋಜನ ಇಲ್ಲ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ನಾನು removal ಗೆ ಹೇಳಲೇ ಇಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಬೇಕಾಗಿರಲಿಲ್ಲ, ಅವರನ್ನು ತೆಗೆದು ಹಾಕಬೇಕು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ನಾನು removal ಗೆ ಹೇಳಲೇ ಇಲ್ಲ. ಏಕೆ removal ಎಂದು ಹೇಳುತ್ತೀರಿ? ಎಲ್ಲಿದೆ ಅಧಿಕಾರ? ಈಗ ಇರುವಂಥ ಕಾನೂನಿನಲ್ಲಿ removal ಗೆ ಅಧಿಕಾರ ಇಲ್ಲ.

(ಗೊಂದಲ)

ಅಧ್ಯಕ್ಷರು: ಬೇಗ ಪೂರೈಸಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಮುಗಿಸುತ್ತೇನೆ. ಅದಕ್ಕೆ ಅದರ ದುರುಪಯೋಗಗಳು ಇವತ್ತು ಆಗುತ್ತಿದೆ. ಅದು ಅಧಿಕಾರಿಗಳು ಮಾತ್ರವಲ್ಲ. ಎಲ್ಲರ ಮೇಲೆ ಮಾಡುತ್ತಾರೆ. ನಾಳೆ ನಮ್ಮ ಮೇಲೆ ಸಹ ಆಗುತ್ತದೆ. ಅದಕ್ಕೆ ಸಮಗ್ರವಾಗಿ ನಾವು ಚಿಂತನೆಯನ್ನು ಮಾಡಬೇಕಾಗಿದೆ. ಲೋಕಾಯುಕ್ತದ corruption ಇವತ್ತು ಎಲ್ಲಾ ಜಗಜ್ಜಾಹೀರಾತಾಗಿ ಆಗುತ್ತಿದೆ. ಇದನ್ನು ನಾವೇ creation ಮಾಡಿದಂಥ ಸಂಸ್ಥೆಯಲ್ಲಿ ನಮ್ಮ ಮೇಲೆಯೇ watch dog ಎಂದು ತಿಳಿದುಕೊಳ್ಳಬೇಕು. ನಮ್ಮ ಮೇಲೆ ಎಂದರೆ ಎಲ್ಲಾ public servants, ವ್ಯವಸ್ಥೆ, ಯಾರು ಇದ್ದಾರೆ, ಅದು ಆಗದ ಬದಲಿಗೆ ಈ watch dog ಹೋಗಿ ನಾನು ಬೇರೆ ಏನಾಗುತ್ತದೆ ಎಂದು, ಅದು unparliamentary ಆಗುತ್ತದೆ, ಅದರ ಬಗ್ಗೆ ನಾನು ಶಬ್ದವನ್ನು ಉಪಯೋಗಿಸುವುದಿಲ್ಲ. ಹಾಗಾಗಿ, ಇವತ್ತು ಗಂಭೀರವಾಗಿ ಮಾಡುತ್ತದೆ. ಇವತ್ತು ಕುಮಾರಸ್ವಾಮಿಯವರು ಇರಬಹುದು, ಯಡಿಯೂರಪ್ಪನವರು ಇರಬಹುದು, ಮಾಡಿದಂಥ ಒಂದು incident ಗೆ ಕಾನೂನು ಉಲ್ಲಂಘನೆ ಮಾಡಿ, 35 series ಹೇಗೆ ಅಧಿಕಾರಿಗಳದ್ದು ಲಿಸ್ಟ್ ಎಂದು ಹೇಳಿದರು, series ಒಂದೇ incident, violations of the Constitution Clause, Article 20(2), clear violation, ಹಾಗೇ Cr.P.C. Section 300, ಅದರದ್ದೂ violation ಇದೆ. ಈ ರೀತಿ humiliation ಮಾಡಿಕೊಂಡು blackmail ಮಾಡುವಂಥ ವ್ಯವಸ್ಥೆಗಳು ನಾವು ಹುಟ್ಟು ಹಾಕಿದಂಥ ಸಂಸ್ಥೆಯಿಂದಲೇ ಇದ್ದರೆ ನಾವು ಸುಮ್ಮನೆ ಇರಬೇಕೇ ಎಂದು ಹೇಳುವಂಥದ್ದು, ನಾವು ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ. ಅದಕ್ಕೆ

ಈ ಕಾಯಿದೆಗಳಲ್ಲಿ ಇವತ್ತು first time ಸಂಸ್ಥೆಯ ಸ್ಥಾಪನೆಯಾದಾಗಿನಿಂದ ಪ್ರಥಮ ಬಾರಿಗೆ ಇವತ್ತು ಲೋಕಾಯುಕ್ತದ ಮೇಲೆಯೇ ಚರ್ಚೆ ಮಾಡುವಂಥ ಒಂದು ದುರಾದೃಷ್ಟ ನಮಗೆ ಬಂದಿದೆ. ಹಾಗಾಗಿ, ನಾವು ಎಲ್ಲಾ ಚಿಂತನೆಯನ್ನು ಮಾಡಿ, ಏನೇನು lacunae ಗಳು ಇದೆ, ಆ corruction ಇದರ ಬಗ್ಗೆ, ಲೋಕಾಯುಕ್ತದವರು corrupt ಅಲ್ಲ ಎಂದು ಹೇಳುವಂಥದ್ದು.........

ಅಧ್ಯಕ್ಷರು: ಅದು ಬೇಡ ಬಿಡಿ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಆಯಿತು, ಸಾರ್ವಜನಿಕರ ಒಂದು ವಾದ ಇದೆ.

(ಗೊಂದಲ)

ಅಧ್ಯಕ್ಷರು: ಅದನ್ನು ಬಿಡಿ. ಈಗ ಇದನ್ನು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ: ಆಯಿತು, ಅದನ್ನು ಮಾಡಬೇಕು ಎಂದು ಹೇಳುವುದಕ್ಕೆ ನಾನು ಒಬ್ಬರನ್ನು ಹೇಗೆ ಬಲಿಪಶು ಮಾಡುತ್ತಿದ್ದಾರೆ ಎನ್ನುವುದಕ್ಕೆ...

ಅಧ್ಯಕ್ಷರು: ಮತ್ತೆ ಅಲ್ಲಿಗೆ ಹೋಗುತ್ತಿದ್ದೀರಲ್ಲ ನೀವು.

(ಗೊಂದಲ)

ಅಧ್ಯಕ್ಷರು: ಲೋಕಾಯುಕ್ತ ಕಾನೂನಿಗೆ ತಿದ್ದುಪಡಿ...

ಶ್ರೀ ಕೆ.ಜಿ. ಬೋಪಯ್ಯ: ಇದನ್ನು ಹೇಳಲೇಬಾರದು........

ಅಧ್ಯಕ್ಷರು: ಅದು ಹಾಗಲ್ಲ. ಯಾವಾಗಲೂ ಸ್ವಲ್ಪ ತಿಳಿದುಕೊಳ್ಳಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: FIR ಗೋಸ್ಕರ ಎಂದು ನಾನು ಹೇಳಲೇ ಇಲ್ಲ.

ಅಧ್ಯಕ್ಷರು: ಬೋಪಯ್ಯನವರೆ, ಇದು ತುಂಬಾ controversial matter ದಯವಿಟ್ಟು ಈ ಸನ್ನಿವೇಶ ಏನಿದೆ, ಲೋಕಾಯುಕ್ತ ಕಾನೂನನ್ನು

ತಿದ್ದುಪಡಿ ಮಾಡುವ ಅವಶ್ಯಕತೆ ಏನಿದೆ ಎನ್ನುವ ಮಾತನ್ನು ಹೇಳಿದರೆ ಮುಗಿಯಿತು.

ಶ್ರೀ ಕೆ.ಜಿ. ಬೋಪಯ್ಯ: ತಿದ್ದುಪಡಿ ಮಾಡುವ ಅವಶ್ಯಕತೆ ಇದೆ. ಅದನ್ನು ಖಂಡಿತ ಮಾಡಬೇಕು. ಮತ್ತೆ ಈಗ ಬಹಳ ಸೀರಿಯಸ್ ಆಗಿ ಅವತ್ತು ಲೋಕಾಯುಕ್ತರ appoint ಆದದ್ದು. ಎಲ್ಲಾ ದಾಖಲೆಗಳಿಗೆ ಹೋಗಿವೆ. ನೇರವಾಗಿ ಅನೇಕ ಸದಸ್ಯರು ಲೋಕಾಯುಕ್ತರ ನೇಮಕಾತಿಯಲ್ಲಿ ನೀವೆಲ್ಲಾ ನೇರವಾಗಿ ಭಾಗಿಯಾಗಿದ್ದೀರಿ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ನಾವೇನು ಹಾಗೆ ಹೇಳಿಲ್ಲ. ನೀವು ಹಣ ತೆಗೆದುಕೊಂಡಿದ್ದೀರಿ ಎಂದು ನಾವೇನು ಹೇಳಿಲ್ಲ. ಯಾರದೋ ಒತ್ತಾಯಕ್ಕೆ ಮಣಿದು...

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಕಾನೂನು ಮಂತ್ರಿಗಳು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು: ಅವೆಲ್ಲಾ ಬರುವುದಿಲ್ಲ ಬಿಡಿ. ಸುಮ್ಮನೆ ಕೆಲಸಕ್ಕೆ ಬಾರದ ಮಾತನ್ನು ಆಡಿಕೊಂಡು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ನನ್ನ ಹಕ್ಕಿನ ಪ್ರಶ್ನೆ ಇದು.

ಅಧ್ಯಕ್ಷರು: ನಿಮ್ಮ ಹಕ್ಕಿನ ಪ್ರಶ್ನೆ ಇರಬಹುದು. I am not allowing.

ಒಬ್ಬ ಮಾನ್ಯ ಸದಸ್ಯರು: ಸಂತೋಷ್ ಹೆಗಡೆಯವರನ್ನು ಕೇಳಬೇಕು ನೀವು.

ಶ್ರೀ ಕೆ.ಜಿ. ಬೋಪಯ್ಯ: ನಮ್ಮ ಮೇಲೆ ಏನು ಆಪಾದನೆ ಮಾಡಿದರೂ ಸುಮ್ಮನೆ ಕುಳಿತುಕೊಳ್ಳಬೇಕೇನು? ಹಾಗಾದರೆ ಅವರು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಲಿ.

ಅಧ್ಯಕ್ಷರು: ನಿಮ್ಮ ಮೇಲೆ ಏನು ಆಪಾದನೆ ಮಾಡಿದ್ದಾರೆ?

ಶ್ರೀ ಕೆ.ಜಿ. ಬೋಪಯ್ಯ: ಅವರು ನೇರವಾಗಿ ಹೇಳಿದ್ದಾರೆ. ಲೋಕಾಯುಕ್ತರ ನೇಮಕಾತಿಯಲ್ಲಿ ನಿಮ್ಮ ಪಾತ್ರಗಳು ಇದೆ. ನಿಮ್ಮ ಮೇಲೆಯೂ enquiry. . . .

ಅಧ್ಯಕ್ಷರು: ನಿಮ್ಮ, ನಿಮ್ಮದು ಎಂದು ಹೇಳಿದ್ದಾರೆಯೆ?

ಶ್ರೀ ಕೆ.ಜಿ. ಬೋಪಯ್ಯ: ಹೌದು.

ಅಧ್ಯಕ್ಷರು: ಹಾಗಿದ್ದರೆ ನಾನು ಕೇಳಲಿಲ್ಲ. ಅದನ್ನು ವಾಪಸ್ಸು ತೆಗೆದುಕೊಳ್ಳಿ, ಕಡತದಿಂದ ತೆಗೆದು ಹಾಕಿ.

ಶ್ರೀ ಕೆ.ಜಿ. ಬೋಪಯ್ಯ: ಹೇಳಿದ್ದಾರೆ. ಆ ಗಲಾಟೆಯಲ್ಲಿ ಗೃಹ ಮಂತ್ರಿಗಳು ಹೇಳಿದ್ದಾರೆ. ಇಲ್ಲವೆಂದು ಹೇಳಲಿ. Record ತೆಗೆಸಲಿ.

ಶ್ರೀ ಕೆ.ಜೆ. ಜಾರ್ಜ್: ನಾನು ಹೇಳಲಿಲ್ಲ. ನಾನು ಸಂತೋಷ್ ಹೆಗಡೆಯವರನ್ನು quote ಮಾಡಿದ್ದೇನೆಯೇ ಹೊರತು ಅದನ್ನು ನಾನು ಹೇಳಲಿಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾವು ಹೇಳಿದ್ದೇನು? ಅವರ credentials check ಮಾಡಬೇಕಾಗಿತ್ತು ಎಂದು ಅಷ್ಟೇ ಹೇಳಿದ್ದು.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಕಾನೂನು ಮಂತ್ರಿಗಳು ಓದಿ ಹೇಳಿದ್ದಾರೆ. ನನ್ನದೇನು ತಕರಾರು ಇಲ್ಲ. ಕಾನೂನು ಮಂತ್ರಿಗಳು ಹೇಳಿದ್ದಾರೆ. ಸಂತೋಷ್ ಹೆಗಡೆ ಹೇಳಿದ್ದಾರೆ. O.K, ನಾನು ಒಪ್ಪುತ್ತೇನೆ. ಆದರೆ ನೀವು ನೇರವಾಗಿ ಹೇಳಿದ್ದೀರಿ. ನಾವೂ ನೇರವಾಗಿ ಹೇಳಿದ್ದೇವೆ. ಮತ್ತೆ

ನೀವೇನು ಸತ್ಯ ಹರಿಶ್ಚಂದ್ರನ ಮೊಮ್ಮಕ್ಕಳಾ? ನಿಮ್ಮದೆಲ್ಲಾ ಗೊತ್ತಿದೆ, ನೀವು ಕೊಡಗಿನಲ್ಲಿರುವಾಗ ಏನೇನು ಮಾಡಿದ್ದೀರಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನೀವು ಅಲ್ಲಿ ಕುಳಿತು ಏನು ಮಾಡಿದ್ದೀರಿ ಎಂಬುದು ನಮಗೆ ಗೊತ್ತಿಲ್ಲವೆ?

(ಗೊಂದಲ)

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆಯಲಾಗಿದೆ.)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತ ನೇಮಕಾತಿ ವಿಚಾರದಲ್ಲಿ ಬೋಪಯ್ಯನವರು "ಕುಂಬಳಕಾಯಿ ಕಳ್ಳ ಎಂದರೆ ತಮ್ಮ ಹೆಗಲನ್ನು ಏಕೆ ತಡವರಿಸಿಕೊಳ್ಳುತ್ತಾರೆ" ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಕೆ.ಜಿ. ಬೋಪಯ್ಯ: ನಿಮ್ಮ ಮೇಲೆ ನಾನು ಏನೂ ಹೇಳಲಿಲ್ಲವಲ್ಲ. ನಿಮ್ಮ ಮೇಲೆ ಹೇಳಿದೆನೆ? ನಿಮ್ಮ ಮೇಲೆ ನಾನು ಏನೂ ಆಪಾದನೆ ಮಾಡಲಿಲ್ಲವಲ್ಲ ನಾನು.

ಶ್ರೀ ಟಿ.ಬಿ. ಜಯಚಂದ್ರ: ಅಲ್ಲಲ್ಲ, ನಾನು ಹೇಳಿದ್ದು, ಸಂತೋಷ್ ಹೆಗಡೆಯವರ ಮಾತು ಇದು.

ಅಧ್ಯಕ್ಷರು: ಹೇ ಕೇಳಿ ಮಾರಾಯರಾ. ಉಪ ಲೋಕಾಯುಕ್ತ ಹುದ್ದೆ ಖಾಲಿ ಇದೆ, ನೇಮಕ ಮಾಡಬೇಕೆಂದು ಮುಖ್ಯಮಂತ್ರಿಗಳಿಂದ ನನಗೂ ಒಂದು ಪತ್ರ ಬಂದಿದೆ. ನಾನು ಚೀಲ ಹಿಡಿದುಕೊಂಡು ಕುಳಿತಿದ್ದೀನಾ? ಬಿಡಿ. ಅವೆಲ್ಲಾ ಸಣ್ಣ-ಸಣ್ಣ ವಿಚಾರಗಳು. ಅದನ್ನು ಮಾಡಲು ಹೋಗಬಾರದು.

ಶ್ರೀ ಬಸವರಾಜ ರಾಯರೆಡ್ಡಿ: ನೋಡಿ ಬೋಪಯ್ಯನವರೆ, ನಾವು ಯಾರೂ ಕೂಡ ನಿಮ್ಮ ಮೇಲಾಗಲಿ, ಜಗದೀಶ್ ಶೆಟ್ಟರ್ ರವರ ಮೇಲಾಗಲಿ

ಆಪಾದನೆ ಮಾಡಿಲ್ಲ. ನಾವು ಹೇಳಿದ್ದೇನು? ಅವರ credential ಅನ್ನು ಇನ್ನೂ check ಮಾಡಬೇಕಿತ್ತು. ಯಾರದೋ ಒತ್ತಡಕ್ಕೆ ಮಾಡಿದಿರಿ ಎಂದು ಹೇಳಿದೇವೋ ಹೊರತು ಇದರಲ್ಲಿ ನೀವು ಹಣ ತೆಗೆದುಕೊಂಡಿದ್ದಿರಿ, ಇದನ್ನು ಮಾಡಿಲ್ಲವೆಂದು ನಾವು ಎಲ್ಲಿಯೂ ಹೇಳಿಲ್ಲ. ಹೇಳುವುದೂ ಇಲ್ಲ. ಯಾವುದೋ ಒತ್ತಡಕ್ಕೆ credential check ಮಾಡಬೇಕಿತ್ತು ಎಂದು ಹೇಳಿದೆವು ಅಷ್ಟೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದು, ಸಂತೋಷ್ ಹೆಗಡೆಯವರ ವಿಚಾರ ಬೆಳಗ್ಗಿನಿಂದ ಇವರು ಸಂತೋಷ್ ಹೆಗಡೆಯವರು ಸರ್ಕಾರಕ್ಕೆ ಅಧಿಕಾರವಿದೆ ಸಿ.ಬಿ.ಐ.ಗೆ ಕೊಡುವುದಕ್ಕೆ ಎಂದು ಹೇಳುತ್ತಿದ್ದರು. ಸಂತೋಷ್ ಹೆಗಡೆಯವರು ಈ ರೀತಿ ಲೋಕಾಯುಕ್ತದಲ್ಲಿ ಸಮೇತ appointment ನಲ್ಲಿ corruption ಆಗಿದೆ ಎಂದು ಹೇಳಿದ್ದಾರೆ ಎಂದು ಹೇಳಿದೆ ವಿನ: ಶ್ರೀಮಾನ್ ಬೋಪಯ್ಯನವರು ಮಾತನಾಡುವಾಗ ಎಂದು ಹೇಳಿದ್ದಾರೆ. ಅವರೇನಾದರೂ ಅದನ್ನು prove ಮಾಡಿದರೆ ತಾವು ಹೇಳಿದ ಶಿಕ್ಷೆಗೆ ನಾನು ತಯಾರಿದ್ದೇನೆ.

(ಗೊಂದಲ)

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಬೋಪಯ್ಯನವರು ಕೆ.ಜೆ. ಜಾರ್ಜ್‌ರವರು ಕೊಡಗಿನ ಹೇಳಿದ ಮಾತನ್ನು ಕಡತದಿಂದ ತೆಗೆಸುವಂತೆ ಅಧ್ಯಕ್ಷರನ್ನು ಒತ್ತಾಯಿಸಿದರು.)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಆ ರೀತಿ ನೀವು ನೇರವಾಗಿ ಆರೋಪ ಮಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು: ಏನು ಹೇಳಿದರು ಜಾರ್ಜ್ ಅವರು. ನನಗೆ ಕೇಳಿಸಲಿಲ್ಲ.

ಶ್ರೀ ಕೆ.ಜೆ. ಜಾರ್ಜ್: ಸರ್ ಅವರು ಮಾತನಾಡುವಾಗ ನಾನು ಎಂದು ಹೇಳಿದ್ದಾರೆ.

ಅಧ್ಯಕ್ಷರು: ಅದನ್ನು ಕಡತದಿಂದ ತೆಗೆದು ಹಾಕಿ.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆಯಲಾಗಿದೆ.)

ಶ್ರೀ ಕೆ.ಜೆ. ಜಾರ್ಜ್: ನಾನೇನಾದರೂ ನೀವೇನು ಶಿಕ್ಷೆ ಕೊಡುತ್ತೀರೋ ಅದನ್ನು ಅನುಭವಿಸಲು ತಯಾರಿದ್ದೇನೆ. ಇಲ್ಲದಿದ್ದರೆ ಇವರು ರಾಜೀನಾಮೆ ಕೊಟ್ಟು ಮನೆಗೆ ಹೋಗುತ್ತಾರಾ?

ಅಧ್ಯಕ್ಷರು: ಅದೆಲ್ಲಾ ಬೇಡ ಮಾರಾಯರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ, ನಾನು ಆ ಕೆಲಸ ಮಾಡದೆ ಇದ್ದರೆ ಇವರು ರಾಜೀನಾಮೆ ಕೊಟ್ಟು ಹೋಗಲು ತಯಾರಿದ್ದಾರಾ?

ಅಧ್ಯಕ್ಷರು: ಅದೆಲ್ಲಾ ಬೇಡ ಸುಮ್ಮನಿರಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಯಡಿಯೂರಪ್ಪನವರು ಅಧಿಕಾರದಲ್ಲಿದ್ದಾಗ............

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಮತ್ತೇನು ಅಧ್ಯಕ್ಷರೆ? (ಗೊಂದಲ) ಅಲ್ಲಿ ಕುಳಿತು ಬಿಟ್ಟು.....

(ಗೊಂದಲ)

ಅಧ್ಯಕ್ಷರು: ಏಕೆ ಹೀಗೆ ಕೂಗುತ್ತೀರಿ; ಸ್ವಲ್ಪ ತಾಳ್ರಿ. What is this?

ಶ್ರೀ ಕೆ.ಜೆ. ಜಾರ್ಜ್: Supreme court ಇವರಿಗೆ ಛೀಮಾರಿ ಮಾಡಿದೆ.

ಅಧ್ಯಕ್ಷರು: ನನಗೆ appeal ಮಾಡಿ, ನಾನು ನೋಡಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಈ ರೀತಿ allegation ಮಾಡುವುದು ಸರಿಯಲ್ಲ. ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಏನು?

ಶ್ರೀ ಸಿದ್ದರಾಮಯ್ಯ: ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಅದು ನನಗೆ ಸರಿಯಾಗಿ ಕೇಳಲಿಲ್ಲ. ಅದನ್ನು ಕಡತದಿಂದ ತೆಗೆದು ಹಾಕಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮತ್ತೆ ನೀವು ಕೇಳಿಸಿಕೊಳ್ಳದೆ ಹೋದರೆ, (ಗೊಂದಲ) ಅದು irresponsible allegation.

(ಗೊಂದಲ)

ಅಧ್ಯಕ್ಷರು: ಬೋಪಯ್ಯನವರೆ, ಹಾಗೆಲ್ಲಾ ಹೇಳಲು ಹೋಗಬೇಡಿ. ಸುಮ್ಮನಿರಿ. ನೀವು ಈ ಸ್ಥಾನದಿಂದ ಕುಳಿತಿದ್ದವರು.

ಶ್ರೀ ಸಿದ್ದರಾಮಯ್ಯ: ಈ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿದ್ದವರು ಏನು ಮಾತನಾಡುತ್ತಿದ್ದಾರೆ. ನೀವು?

ಶ್ರೀ ಕೆ.ಜೆ. ಜಾರ್ಜ್: ಬಾಯಿಗೆ ಬಂದದ್ದೆಲ್ಲಾ ಮಾತನಾಡುವುದಲ್ಲ.

ಒಬ್ಬ ಮಾನ್ಯ ಸದಸ್ಯರು: ಆ ಸ್ಥಾನ ಕೊಟ್ಟಿದ್ದರಲ್ಲ, ಅವರು ತಿಳಿದುಕೊಳ್ಳಬೇಕು.

ಅಧ್ಯಕ್ಷರು: ಕೇಳಿ. Coorg ನಲ್ಲಿ ನಮ್ಮ ಶಿವಮೊಗ್ಗ ಮಲೆನಾಡಿನಲ್ಲಿ ಮರ ಕದ್ದು ಕೊಯ್ದಿದ್ದವರು ಯಾರು? ನಿಮ್ಮ ಮನೆ ಕಟ್ಟಿದ್ದೀರಲ್ಲ, ಕದ್ದಿಲ್ಲವೇನು ನೀವು? ನಮ್ಮ ಮನೆ ಊರಿನಲ್ಲಿ ಕಟ್ಟಿದೇವಲ್ಲ, ನಾವು ಕದಿಯಲಿಲ್ಲವೇ?

ಶ್ರೀ ಕೆ.ಜಿ. ಬೋಪಯ್ಯ: ನಾವು ಕದಿಯಲಿಲ್ಲ. ನಾವು ನಮ್ಮ ಮರ ಉಪಯೋಗಿಸುತ್ತಿದ್ದೇವೆ.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆಯಲಾಗಿದೆ.)

ಅಧ್ಯಕ್ಷರು: ಸುಮ್ಮನಿರಿ, ಅವೆಲ್ಲಾ ಇರುವುದೆ. ಅವೆಲ್ಲವನ್ನು ಹೇಳಲು ಹೋಗಬಾರದು.

ಒಬ್ಬ ಮಾನ್ಯ ಸದಸ್ಯರು: ಇವರು ಮಾತ್ರ ಹರಿಶ್ಚಂದ್ರರು.

(ಗೊಂದಲ)

ಅಧ್ಯಕ್ಷರು: ಬೇಡ ನಾಕು, ಹಾಗೆಲ್ಲ ಹೇಳಬಾರದು.

ಶ್ರೀ ಕೆ.ಜಿ. ಬೋಪಯ್ಯ: ಆಯಿತು ಅಧ್ಯಕ್ಷರೆ.

ಶ್ರೀ ಸಿ.ಟಿ. ರವಿ: ಬೋಪಯ್ಯನವರೆ ಒಂದು ನಿಮಿಷ. ಮಾನ್ಯ ಅಧ್ಯಕ್ಷರೆ, ಈಗ ಆಡಳಿತ ಪಕ್ಷ, ವಿರೋಧ ಪಕ್ಷ ಎಂಬ ಪಕ್ಷಭೇದ ಇಲ್ಲದೆ ಸಂತೋಷ್ ಹೆಗಡೆಯವರು ಹೇಳಿರುವ ಮಾತಿನ ಬಗ್ಗೆ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಸಭೆ ಅಭಿಪ್ರಾಯ ವ್ಯಕ್ತಪಡಿಸಿದೆ. ಅದು ಲೋಕಾಯುಕ್ತರ ನೇಮಕದಿಂದ ಆರಂಭಗೊಂಡು ಲೋಕಾಯುಕ್ತ ಇಲಾಖೆಯ ಹಗರಣದವರೆಗೆ ಕೂಡಾ ಗಂಭೀರವಾಗಿಯೇ ತೆಗೆದುಕೊಳ್ಳಬೇಕು. ಲೋಕಾಯುಕ್ತ ನೇಮಕದಲ್ಲಿ ಅವ್ಯವಹಾರವಾಗಿದೆ, ಭ್ರಷ್ಟಾಚಾರ ನಡೆದಿದೆ ಎಂದರೆ ಯಾವುದೇ ಸ್ಥಾನದಲ್ಲಿರುವಂತಹ ಎಂತಹ ವ್ಯಕ್ತಿಗಳಾದರೂ ಕೂಡಾ ಅದು ಅಕ್ಷಮ್ಯ ಅಪರಾಧ. ಹಾಗಾಗಿ ಅವರನ್ನು ಯಾವ ರೀತಿ ಶಿಕ್ಷೆಗೆ ಒಳಪಡಿಸಿದರೂ ತಪ್ಪಲ್ಲ. ಸರ್ಕಾರ ಒಂದು ವಿಶೇಷ ತನಿಖೆ ಮಾಡಲಿ. ನನಗೇನು ಎಂದರೆ ಇದು ಲೋಕಾಯುಕ್ತರ ಮಾತನ್ನು ಹಗುರವಾಗಿ ತೆಗೆದುಕೊಳ್ಳಲು ಬರುವುದಿಲ್ಲ. ಸಂತೋಷ್ ಹೆಗಡೆಯವರ ಮಾತನ್ನು ನಾವು ಹಗುರವಾಗಿ ತೆಗೆದುಕೊಳ್ಳಲು ಬರುವುದಿಲ್ಲ. ಗಂಭೀರವಾಗಿ ಒಂದು ತನಿಖೆ ಮಾಡಿಸಿ. ಯಾರು ತಿಂದಿದ್ದಾರೆ ಗೊತ್ತಾಗಲಿ.

ಒಬ್ಬ ಮಾನ್ಯ ಸದಸ್ಯರು: ಅವರೂ ಒಂದು affidavit file ಮಾಡಲಿ.

ಅಧ್ಯಕ್ಷರು: ರವಿ ಇದು ಸೂಕ್ಷ್ಮವಾದ ವಿಚಾರ. ಸಂತೋಷ್ ಹೆಗಡೆ ಇರಬಹುದು, ಯಾರೇ ಇರಬಹುದು. ಅಧಿಕೃತವಾಗಿ ಏನು ಹೇಳಿದ್ದಲ್ಲ. ಈಗ ಪತ್ರಿಕೆಗಳಲ್ಲಿ ಕೆಲವು ಸುದ್ದಿ ಬರುತ್ತವೆ. ನಮ್ಮ ಎಂ.ಬಿ. ಪಾಟೀಲ್ ರವರು ಹಾಗೆ ಹೇಳಲಿಲ್ಲ, ಬೇರೆ ರೂಪದಲ್ಲಿ ಬಂದಿದೆ ಎಂದು ಹೇಳಲಿಲ್ಲವೆ ಹಾಗೆ ಆಗಿದೆ. ಅದನ್ನೆಲ್ಲಾ ನಾವು ಅಷ್ಟು... ಯಾರು? ಇವರು ನೇಮಕ ಮಾಡಿದ್ದಾ? ನೇಮಕ ಮಾಡಿದವರು ಯಾರು? ಸಲಹೆ ಕೇಳಿದ್ದು ಅಷ್ಟೆ. ಹೆಸರನ್ನು, ಆದುದರಿಂದ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳಲಾಗುವುದಿಲ್ಲ. ಬಿಟ್ಟು ಬಿಡಿ.

ಶ್ರೀ ಸಿ.ಟಿ. ರವಿ: ಬಹುಶಃ ನಮಗೆ ಇರುವ ಮಾಹಿತಿ ಅಶ್ವಿನ್ ರಾವ್ ಡೈರಿಯಲ್ಲಿಯೂ ಕೂಡಾ ಎಷ್ಟು ಕೊಟ್ಟಿದ್ದೇನೆ, ಯಾರಿಗೆ ಕೊಟ್ಟಿದ್ದೇನೆ ಎಂದು ಬರೆದಿರುವ ಸಾಧ್ಯತೆ ಇರುತ್ತದೆ. ಅದನ್ನು enquiry ಮಾಡಿ, ಡೈರಿ ಸೀಜ್ ಮಾಡಿದರೆ ಅದೂ ಸಿಗಬಹುದು. ತೆಗೆದುಕೊಂಡಿರುವುದು ಸಿಗುತ್ತದೆ. ಕೊಟ್ಟಿರುವುದು ಸಿಗುತ್ತದೆ.

ಅಧ್ಯಕ್ಷರು: ಸಂತೋಷ್ ಹೆಗಡೆಯವರು Supreme Court Judge ಆಗಿ ಬಂದವರು. ಅವರು ಕಾನೂನು ಪ್ರಕಾರ ಇಂತಹ ವಿಚಾರ ಅವರಿಗೆ ಗೊತ್ತಿದ್ದರೆ ಹೇಗೆ, ಯಾರಿಗೆ ಎಲ್ಲಿ ತಿಳಿಸಬೇಕೆನ್ನುವುದು ನಮ್ಮ-ನಿಮಗಿಂತ ಅವರಿಗೆ ಚೆನ್ನಾಗಿ ಗೊತ್ತು. ಆ ಕೆಲಸ ಮಾಡದೆ ಪತ್ರಿಕೆಗೆ ಹೇಳಿಕೆ ಕೊಡುವುದು ಇದೆಯಲ್ಲ, ಮೊದಲನೆ ತಪ್ಪು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಹೇಳಿದ್ದು ಆಯಿತಲ್ಲ, close ಮಾಡಿ. Please close it. ಮುಕ್ತಾಯ ಮಾಡಿದಿರಲ್ಲ.

ಶ್ರೀ ಕೆ.ಜಿ. ಬೋಪಯ್ಯ: ಹಾಗಾಗಿ ಇವತ್ತು ಏನು ಚರ್ಚೆಗಳಾಗಿವೆ, ಇದನ್ನು ಗಂಭೀರವಾಗಿ ತೆಗೆದುಕೊಂಡು ತಿದ್ದುಪಡಿ ತರುವಾಗ ನನ್ನ ಸಲಹೆ ಏನಿದೆ ಎಂದರೆ...

ಅಧ್ಯಕ್ಷರು: ಇಲ್ಲಿ ಬಂದೇ ಬರುತ್ತದೆಯಲ್ಲ.

ಶ್ರೀ ಕೆ.ಜಿ. ಬೋಪಯ್ಯ: ಅಲ್ಲ, ಸಾರ್ವಜನಿಕರು ಇಷ್ಟೆಲ್ಲಾ ಮಾಡುವಾಗ ಅವರೆಲ್ಲರ ಅಭಿಪ್ರಾಯ ತೆಗೆದುಕೊಂಡು ಲೋಕಾಯುಕ್ತ ಸಂಸ್ಥೆ ಯಾವ ಉದ್ದೇಶದಿಂದ ಹಿಂದೆ ಸ್ಥಾಪನೆಯಾಗಿದೆ, ಅದಕ್ಕೆ ಪೂರಕವಾಗಿ ಎಲ್ಲಾ ನ್ಯೂನತೆಗಳನ್ನು ಸೇರಿ ಮಾಡಬೇಕು, ಅವರೇನೋ ಮಾಡಿ ಇಲ್ಲಿ ನಾವು-ನಾವು ಜಗಳವಾಡುವ ಪರಿಸ್ಥಿತಿಗೆ ಬರಬಾರದು ಎಂಬುದೇ ನನ್ನ ಅಪೇಕ್ಷೆ, ಧನ್ಯವಾದಗಳು.

ಅಧ್ಯಕ್ಷರು: ಆಯಿತು, ಈಗ ಚರ್ಚೆ ಮುಕ್ತಾಯವಾಗಿದೆ. ಉತ್ತರ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ: ನಾಳೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ಬೇಡ ಉತ್ತರ ಹೇಳಿ, ಇದನ್ನು close ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ: ಇಲ್ಲ, ನಾಳೆ ತಪ್ಪುವುದಿಲ್ಲ.

ಅಧ್ಯಕ್ಷರು: ಆಯಿತು, ನಾಳೆಯೇ ಉತ್ತರ ಕೊಡಿ. ಈಗ ಬಿಲ್ ಬೇಕೇನು?

ಶ್ರೀ ಸಿದ್ದರಾಮಯ್ಯ: ನಾಳೆ ಪ್ರಶ್ನೋತ್ತರ ವೇಳೆ ಮುಗಿದ ತಕ್ಷಣ ಉತ್ತರ ಕೊಡುತ್ತಾರೆ. ಏನು ಅರ್ಧ ಗಂಟೆ ಅಷ್ಟೆ.

ಶ್ರೀ ಚಂದ್ರಶೇಖರ ಮಾಮನಿ: ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವುದು ಇದೆ. ಮೊದಲು ಅದನ್ನು ತೆಗೆದುಕೊಳ್ಳಿ, ಉತ್ತರ ಬೇಕಾದರೆ ನಾಳೆ ಕೊಡಲಿ.

ಅಧ್ಯಕ್ಷರು: ಈಗ ಗಮನ ಸೆಳೆಯುವುದನ್ನು ತೆಗೆದುಕೊಳ್ಳೋಣ.

ಶ್ರೀ ಚಂದ್ರಶೇಖರ ಮಾಮನಿ: ಗಮನ ಸೆಳೆಯುವುದನ್ನು ಮುಗಿಸಿರಿ. ಮಾನ್ಯ ದೇಶಪಾಂಡೆಯವರು ನಾಳೆ ಉತ್ತರ ಕೊಡುತ್ತಾರೆ.

ಅಧ್ಯಕ್ಷರು: ಬಿಲ್ introduce ಮಾಡಿ ಬಿಡುತ್ತಾರೆ.

ಶ್ರೀ ಚಂದ್ರಶೇಖರ ಮಾಮನಿ: ನಾಳೆ ಕೊಡಿ ಸಾರ್. ಚರ್ಚೆ ಆಗಬೇಕಾಗುತ್ತದೆ.

ಶ್ರೀ ಆರ್.ವಿ.ದೇಶಪಾಂಡೆ: ಇದು ಬೆಳಗಾವಿಯಲ್ಲಿಯೇ introduce ಆಗಿದೆ.

(ಗೊಂದಲ)

ಅಧ್ಯಕ್ಷರು: ಪರ್ಯಾಲೋಚನೆ ಎಂದರೆ time ಹಿಡಿಯುತ್ತದೆ.

ಶ್ರೀ ಚಂದ್ರಶೇಖರ ಮಾಮನಿ: Time ಹಿಡಿಯುತ್ತದೆ. ಹರಿಬರಿ ಏಕೆ? ನಾಳೆ ತೆಗೆದುಕೊಳ್ಳಿ. ನಾಳೆ ಮಾಡೋಣ. ಈಗ ದಯವಿಟ್ಟು ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳಿ.

ಅಧ್ಯಕ್ಷರು: ದೇಶಪಾಂಡೆಯವರೆ, Friday ತೆಗೆದುಕೊಳ್ಳೋಣ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗು ಪಶುಸಂಗೋಪನ ಸಚಿವರು): ಮಾನ್ಯ ಅಧ್ಯಕ್ಷರೆ, ಬಿಲ್ಸ್ ಕೌನ್ಸಿಲ್ ಗೆ ಹೋಗಬೇಕಾಗುತ್ತದೆ, ಬಿಲ್ಸ್ ಕೌನ್ಸಿಲ್ ಗೆ ಹೋಗಲಿಲ್ಲ. ನೀವು ಇಲ್ಲಿ ಪಾಸ್ ಮಾಡಿದ ಮೇಲೆ ಕೌನ್ಸಿಲ್‌ಗೆ ಹೋಗಬೇಕಲ್ಲಾ, ಅವರು ಬಿಲ್ ಒಂದು ವಾರದ ಮುಂಚೆ ಬರದೆ ಇದ್ದರೆ ಯಾವ ಬಿಲ್ ಅನ್ನು ಚರ್ಚೆ ಮಾಡುವುದಕ್ಕೆ ಅವರು ತಯಾರಿಲ್ಲ. ಇದಕ್ಕೆ ಜಾಸ್ತಿ ಹೊತ್ತು ಆಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ನಾಳೆ ಕುಮಾರಸ್ವಾಮಿಯವರು No Confidence Motion ಇದೆ, ಏನು ಮಾಡುವುದಕ್ಕಾಗುತ್ತದೆ? ಇದರಲ್ಲಿ ಏನೂ ಇಲ್ಲ, ಇದನ್ನು ತಾವು (ಬಿಜೆಪಿ) ಮಾಡಿದ್ದು.

ಶ್ರೀ ಟಿ.ಬಿ. ಜಯಚಂದ್ರ: ಕೌನ್ಸಿಲ್‌ಗೆ ಹೋಗುವುದೇ ದೊಡ್ಡ ಪ್ರಾಬ್ಲಂ ಆಗುತ್ತದೆ.

ಅಧ್ಯಕ್ಷರು: 22ರವರೆಗೆ ಇದೆಯಲ್ಲಾ, ಏನಂತೆ.

ಶ್ರೀ ಟಿ.ಬಿ. ಜಯಚಂದ್ರ: ಅವರು ಒಂದು ವಾರ ಮುಂಚೆ ಬರದೆ ಇದ್ದರೆ ನಾವು ಚರ್ಚೆ ಮಾಡುವುದಿಲ್ಲವೆನ್ನುತ್ತಾರೆ.

ಅಧ್ಯಕ್ಷರು: ಯಾರು?

ಶ್ರೀ ಟಿ.ಬಿ. ಜಯಚಂದ್ರ: ಕೌನ್ಸಿಲ್‌ಗೆ ಬಿಲ್ಸ್ ಒಂದು ವಾರದ ಮುಂಚೆ ಹೋಗಬೇಕು.

ಅಧ್ಯಕ್ಷರು: ಇವತ್ತು ಕಳುಹಿಸಿ ಮಾರನೆ ದಿವಸ ಬಂದಂಥ ಘಟನೆ ಇಲ್ಲೇ ನಮ್ಮ ಹತ್ತಿರವಿದ್ದಾವೆ.

ಶ್ರೀ ಟಿ.ಬಿ. ಜಯಚಂದ್ರ: ಅವರು ಚರ್ಚೆ ಮಾಡುತ್ತಾರಲ್ಲ, ಅವರಿಗೊಂದು ಅವಕಾಶ ಕೊಡಬೇಕಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ನಾಳೆ ಗುರುವಾರ private bills ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಆಗುವುದಿಲ್ಲ ಬಿಡಿ.

ಶ್ರೀ ಕೆ. ಶಿವಮೂರ್ತಿ: ಸರ್, ನಾಳೆ ನಾವೊಂದು private bill ಬಿಲ್ ಅನ್ನು move ಮಾಡಿದ್ದೇವೆ.

ಅಧ್ಯಕ್ಷರು: ಈಗ ಚರ್ಚೆಗೆ ಬಹಳ ಸಮಯವಾಗುವುದಿದ್ದರೆ, ನಾಳೆ ಸಂಜೆ ತೆಗೆದುಕೊಳ್ಳೋಣ.

ಶ್ರೀ ಆರ್.ವಿ. ದೇಶಪಾಂಡೆ: ನಾಳೆ ಸಂಜೆ ಒಂದು ಕಾರ್ಯಕ್ರಮವಿದೆ. Tourism Policy release ಆಗುತ್ತಿದೆ. ಪ್ರವಾಸೋದ್ಯಮ ನೀತಿಯನ್ನು ಮುಖ್ಯಮಂತ್ರಿಗಳು ರಿಲೀಸ್ ಮಾಡುತ್ತಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: Easyಯಾಗಿ ಆಗಿ ಹೋಗಿಬಿಡುತ್ತದೆ, ಕೌನ್ಸಿಲ್ ಗೆ ಹೋಗಿ ಪಾಸ್ ಆಗಿ ಬರಬೇಕು, ಈ ವರ್ಷ ಶೈಕ್ಷಣಿಕ ಚಟುವಟಿಕೆ ಪ್ರಾರಂಭ ಮಾಡಬೇಕಾಗಿದೆ, ಮೂವ್ ಮಾಡಿಬಿಡಿ, ಅದಕ್ಕೆ ಯಾರದೇನು ತಕರಾರು ಇಲ್ಲ.

ಶ್ರೀ ಸಿ.ಟಿ. ರವಿ: ಈ academic yearದಲ್ಲಿ ಹೇಗೆ ಪ್ರಾರಂಭ ಮಾಡುವುದಕ್ಕಾಗುತ್ತದೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾವು ಮಾಡುತ್ತೇವೆ, ಸುಮ್ಮನಿರಪ್ಪ.

ಶ್ರೀ ಸಿ.ಟಿ. ರವಿ: ಪಾಸ್ ಮಾಡಿ ಕೊಡೋಣ. ಕೆಲವು ಸಣ್ಣ ಸಲಹೆ ಕೊಡುವುದಿದೆ, ಚರ್ಚೆ ಮಾಡುವುದಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಇದರ ಮೇಲೆ ನಾವೆಲ್ಲಾ ಯಾರ್‍ಯಾರು ಚರ್ಚೆಯಲ್ಲಿ ಭಾಗವಹಿಸಬೇಕು ಎನ್ನುವ ಬಗ್ಗೆ ನಮ್ಮಲ್ಲಿ ಚರ್ಚೆಯಾಗಬೇಕಾಗಿದೆ. ಈಗ ಸಮಯ 7.00 ಗಂಟೆಯಾಗಿದೆ, ಮೊದಲನೆಯದಾಗಿ, ಇದನ್ನು ಪಾಸ್ ಮಾಡುವುದಕ್ಕೆ ಯಾರದು ವಿರೋಧವಿಲ್ಲ, ಕೆಲವು ಸೂಚನೆಗಳನ್ನು ಕೊಡಬೇಕಾಗಿದೆ. ಇದು ಇವತ್ತೇ ಬರುತ್ತದೆ ಎಂದು ನಮ್ಮ ಕೆಲವು ಸದಸ್ಯರ ಗಮನಕ್ಕೆ ಬಂದಿಲ್ಲದಿರುವುದರಿಂದ, ಅವರು ಕೆಲವರು ಈಗ ಇಲ್ಲ ಮತ್ತು ಈಗ 7.00 ಗಂಟೆಯಾಗಿದೆ.

ಶ್ರೀ ಸಿದ್ದರಾಮಯ್ಯ [ಮಾನ್ಯ ಮುಖ್ಯಮಂತ್ರಿಗಳು]: ನೀವೇ ಶಿಕ್ಷಣ ಸಚಿವರಾಗಿದ್ದಿರಿ, ನೀವೇ ಹೀಗೆ ಮಾತನಾಡುತ್ತೀರಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವನಾಗಿದ್ದೆ.

ಶ್ರೀ ಸಿ.ಟಿ. ರವಿ: ನಾಳೆ ಅಥವಾ ನಾಡಿದ್ದು ತೆಗೆದುಕೊಳ್ಳಿ, ನಾವು ಒಂದು ಮೀಟಿಂಗ್‌ಗೆ ಹೋಗಬೇಕಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇದನ್ನು ನಾಡಿದ್ದು ತೆಗೆದುಕೊಳ್ಳಿ, ಇನ್ನೇನು defeat ಆಗುವ ಬಿಲ್ ಆದರೆ ಪರವಾಗಿಲ್ಲ, ಅಂಥದ್ದೇನೂ ಇಲ್ಲ,

ಒಳ್ಳೆಯ ಸಲಹೆಗಳನ್ನು ಕೊಡುವುದಕ್ಕೆ ನಾವು ಸಹ ಒಂದು ಅವಕಾಶವನ್ನು ಕೇಳಿದ್ದೇವೆ. ನಾಳೆ ತೆಗೆದುಕೊಳ್ಳೋಣ.

ಅಧ್ಯಕ್ಷರು: ಶುಕ್ರವಾರ ಇಲ್ಲವೆ ನಾಳೆ ಮಧ್ಯಾಹ್ನ ತೆಗೆದುಕೊಳ್ಳೋಣ.

ಶ್ರೀ ಆರ್.ವಿ. ದೇಶಪಾಂಡೆ: ಸರ್, ನಾಳೆ ಅಜೆಂಡಾದಲ್ಲಿ ಎಷ್ಟು ವಿಷಯಗಳಿವೆ, ಇದಕ್ಕೆ reply ಇದೆ, JD(S) ರವರದು No Confidence Motion ಇದೆ, ಇಷ್ಟು ಇದೆ? ಶುಕ್ರವಾರ ಬೆಳಿಗ್ಗೆ ಮೊದಲು ಬಿಲ್ ತೆಗೆದುಕೊಳ್ಳಿ.

ಅಧ್ಯಕ್ಷರು: ಆಯಿತು, ಶುಕ್ರವಾರ ಮೊದಲು ಬಿಲ್ ತೆಗೆದುಕೊಳ್ಳೋಣ, ಈಗ ಗಮನ ಸೆಳೆಯುವ ಸೂಚನೆಗಳು.

7. ಗಮನ ಸೆಳೆಯುವ ಸೂಚನೆಗಳು

ವಿಷಯ: ಪಾವಗಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸೋಲಾರ್ ಪಾರ್ಕ್ ನಿರ್ಮಿಸುವ ಯೋಜನೆ ಸಂಬಂಧವಾಗಿ ಈ ಯೋಜನೆ ರೂಪುರೇಷೆಗಳ ಬಗ್ಗೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ: ಮಾನ್ಯ ಅಧ್ಯಕ್ಷರೆ, ಪಾವಗಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸೋಲಾರ್ ಪಾರ್ಕ್ ನಿರ್ಮಿಸುವ ಯೋಜನೆ ಸಂಬಂಧವಾಗಿ ಈ ಯೋಜನೆ ರೂಪುರೇಷೆಗಳ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ಭಾರತ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ಸೌರ ವಿದ್ಯುತ್ ಪಾರ್ಕ್‌ಗಳನ್ನು ಸ್ಥಾಪಿಸಲು ರೂ. 500 ಕೋಟಿಗಳನ್ನು ಆರ್ಥಿಕ ವರ್ಷ 2014–15ರಲ್ಲಿ ಮೀಸಲಿರಿಸಿರುವುದಾಗಿ ಮತ್ತು ಸೋಲಾರ್ ಪಾರ್ಕ್‌ಗಳನ್ನು ಸ್ಥಾಪಿಸಲು ಡಿ.ಪಿ.ಆರ್ ತಯಾರಿಸಲು ಪ್ರತಿ ಪಾರ್ಕಿಗೆ ರೂ. 25 ಲಕ್ಷ ಬಿಡುಗಡೆ ಮಾಡಲಾಗುತ್ತದೆ ಎಂದು ನಿರ್ದೇಶಕರು, ಎಂ.ಎನ್.ಆರ್.ಇ ರವರ ಪತ್ರ ಸಂಖ್ಯೆ: 30/52/2014–15/NSM ದಿನಾಂಕ: 12.12.2014 ರಲ್ಲಿ ತಿಳಿಸಿರುತ್ತಾರೆ. ಇದರ ಮಾರ್ಗಸೂಚಿಗಳಂತೆ ರಾಜ್ಯದಲ್ಲಿ